3. ಮುಂದಿನ ಒಂದು ವರ್ಷದಲ್ಲಿ ವಿವಿಧ ಕ್ಷೇತ್ರಗಳಲ್ಲಿ ನನ್ನ ಸರ್ಕಾರ ಏನೆಲ್ಲ ಸಾಧಿಸಲು ಉದ್ದೇಶಿಸಿದೆ ಎಂದು ತಿಳಿಸುವುದಕ್ಕೆ ಮೊದಲು ನನ್ನ ಸರ್ಕಾರದ ಗಮನವನ್ನು ಸೆಳೆದಂಥ ಹಾಗೂ ನಮ್ಮ ವಿಶೇಷ ಪ್ರಯತ್ನಗಳ ಅಗತ್ಯವಿರುವಂಥ ಕೆಲವು ಮುಖ್ಯ ಬೆಳವಣಿಗೆಗಳ ಬಗ್ಗೆ ತಿಳಿಸುವುದು ಸಂದರ್ಭೋಚಿತವೆಂದು ನನ್ನ ಭಾವನೆ.

4. ದುರದೃಷ್ಟವಶಾತ್, 1993-94ರಲ್ಲಿ ಕರ್ನಾಟಕವು ಹಿಂದೆಂದೂ ಕಾಣದಂಥ ನೈಸರ್ಗಿಕ ಪ್ರಕೋಪಗಳಿಗೆ ತುತ್ತಾಯಿತು. ಬೀದರ್, ಬಿಜಾಪುರ, ಗುಲ್ಬರ್ಗಾ, ಬೆಳಗಾಂ ಮತ್ತು ರಾಯಚೂರು ಜಿಲ್ಲೆಗಳಲ್ಲಿ ದಿನಾಂಕ : 30-9-93ರಂದು ಸಂಭವಿಸಿದ ಭೂಕಂಪದಿಂದಾಗಿ 9 ಜನ ಅಸು ನೀಗಿದ್ದು, 216 ಮನೆಗಳು ಪೂರ್ತಿ ಕುಸಿದು ಬಿದ್ದವು, ಅಲ್ಲದೆ, 15,399 ಗುಡಿಸಲುಗಳು ಕಚ್ಚಾ ಮನೆಗಳು ಹಾನಿಗೊಳಗಾಗಿದ್ದು, 15,128 ಮನೆಗಳು ತೀವ್ರವಾಗಿ ಬಿರುಕು ಬಿಟ್ಟವು. ಖಾಸಗಿ ಹಾಗೂ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಸುಮಾರು 9.25 ಕೋಟಿ ರೂ.ಗಳ ಹಾನಿ ಉಂಟಾಗಿದೆಯೆಂದು ಅಂದಾಜು ಮಾಡಲಾಗಿದೆ.

5. ಅಲ್ಲದೆ, 1993ರ ಅಕ್ಟೋಬರ್ ತಿಂಗಳಲ್ಲಿ ರಾಯಚೂರು, ಬಿಜಾಪುರ, ಧಾರವಾಡ, ಬೆಳಗಾಂ, ಬಳ್ಳಾರಿ, ಶಿವಮೊಗ್ಗ ಮತ್ತು ರಾಜ್ಯದ ಇತರ ಜಿಲ್ಲೆಗಳಲ್ಲಿ ಉಂಟಾದ ಅತಿವೃಷ್ಟಿ ಹಾಗೂ ಸತತವಾಗಿ ಸುರಿದ ಮಳೆಯಿಂದಾಗಿ ಖಾಸಗಿ ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಅತೀವ ಹಾನಿಯುಂಟಾಯಿತು. 67 ಗ್ರಾಮಗಳು ಜಲಾವೃತವಾದವು ಮತ್ತು 77ಜನರು ಪ್ರಾಣ ಕಳೆದುಕೊಂಡರು. ಈ ಮಳೆಯಿಂದಾಗಿ 15,331 ಮನೆಗಳು ಪೂರ್ತಿ ಕುಸಿದುಬಿದ್ದವು ಮತ್ತು 1,84,834 ಮನೆಗಳು ಭಾಗಶಃ ಕುಸಿದವು. ಬೆಳೆಗಳೂ ಒಳಗೊಂಡಂತೆ ಖಾಸಗಿ ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಉಂಟಾದ ಹಾನಿಯನ್ನು ಒಟ್ಟು 247.97 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ.

6. ನನ್ನ ಸರ್ಕಾರವು ಭೂಕಂಪದಿಂದ ಮತ್ತು ಅತಿವೃಷ್ಟಿಯಿಂದ ನೊಂದವರಿಗೆ ತಕ್ಷಣ ಪರಿಹಾರ ಒದಗಿಸಲು ತುರ್ತು ಕ್ರಮ ಕೈಗೊಂಡಿತು. ಮೃತರ ಹತ್ತಿರದ ಸಂಬಂಧಿಕರಿಗೆ ಸಂದಾಯ ಮಾಡುತ್ತಿದ್ದ ನಗದು ಪರಿಹಾರವನ್ನು 20,000 ರೂ.ಗಳಿಂದ 1 ಲಕ್ಷ ರೂ.ಗಳಿಗೆ, ಪೂರ್ತಿಯಾಗಿ ಕುಸಿದು ಬಿದ್ದ ಮನೆಗಳಿಗಾಗಿ ಸಂದಾಯ ಮಾಡುತ್ತಿದ್ದ ಪರಿಹಾರವನ್ನು 5,000 ದಿಂದ 10,000 ರೂ.ಗಳಿಗೆ ಏರಿಸಲಾಯಿತು ಮತ್ತು ಭಾಗಶಃ ಕುಸಿದುಬಿದ್ದ ಮನೆಗಳಿಗಾಗಿ 5,000 ರೂ.ಗಳ ಗರಿಷ್ಠ ಮೊಬಲಗನ್ನು ಪರಿಹಾರವಾಗಿ ನೀಡಲಾಯಿತು.

7. ರಾಜ್ಯದ ಸಂಪನ್ಮೂಲಗಳ ಮೇಲೆ ಉಂಟಾಗಬಹುದಾದ ಹೊರೆಯನ್ನು ಲೆಕ್ಕಿಸದೇ, ನೈಸರ್ಗಿಕ ಪ್ರಕೋಪಗಳಿಗೆ ಒಳಗಾದವರಿಗೆ ನೆರವು ಮತ್ತು ಪರಿಹಾರವನ್ನು ಒದಗಿಸುವ ಎಲ್ಲ ಕ್ರಮಗಳನ್ನು ಸರ್ಕಾರವು ಕೈಗೊಂಡಿತು. ದಿನಾಂಕ 19-1-94ರವರೆಗೆ

ಪ್ರವಾಹ ಪೀಡಿತ ಜಿಲ್ಲೆಗಳಿಗೆ 43.09ಕೋಟಿ ರೂ.ಗಳನ್ನು ಮತ್ತು ಭೂಕಂಪಕ್ಕೊಳಗಾದ ಜಿಲ್ಲೆಗಳಿಗೆ 2.80 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ವಿಶೇಷವಾಗಿ ನನ್ನ ಸರ್ಕಾರವು 1992-93 ಮತ್ತು 1993-94ರ ಸಾಲಿನಲ್ಲಿ ತೊಗರಿಗೆ ಉಂಟಾದ ಹಾನಿಗೆ ಪರಿಹಾರವಾಗಿ 7.91 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಅದರಂತೆಯೇ, 1993ರ ಅಕ್ಟೋಬರ್‌ನಲ್ಲಿ ಬೆಳೆಗಳಿಗೆ ಉಂಟಾದ ಹಾನಿಗೆ ಪರಿಹಾರವಾಗಿ 6.68 ಕೋಟಿ ರೂ.ಗಳನ್ನು ವಿತರಿಸಲಾಗಿದೆ. ಅಲ್ಲದೆ, ಪ್ರವಾಹದಿಂದ ಉಂಟಾದ ಹಾನಿಗೆ ಸಂಬಂಧಿಸಿದಂತೆ ಅಲ್ಪಾವಧಿ ಹಾಗೂ ದೀರ್ಘಾವಧಿ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ 200 ಕೋಟಿ ರೂ.ಗಳ ಅನುದಾನವನ್ನು ಒದಗಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ. ಹಾಗೆಯೇ, ನನ್ನ ಸರ್ಕಾರವು ಭೂಕಂಪದಿಂದ ತೊಂದರೆಗೀಡಾದ 48 ಗ್ರಾಮಗಳ ಪುನರ್ವಸತಿಗಾಗಿ 93.54 ಕೋಟಿ ರೂ.ಗಳ ವಿಶ್ವಬ್ಯಾಂಕ್ ನೆರವಿನ ಯೋಜನೆಯೊಂದನ್ನು ಸಿದ್ಧಪಡಿಸಿದ್ದು ಅದನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ.

8. ನನ್ನ ಸರ್ಕಾರವು ಕರ್ನಾಟಕ ಹಾಗೂ ಮಹಾರಾಷ್ಟ್ರದಲ್ಲಿ ಸಂಭವಿಸಿದ ಪ್ರವಾಹ ಮತ್ತು ಭೂಕಂಪದಿಂದ ನೊಂದವರಿಗೆ ಪರಿಹಾರವಾಗಿ, ಸರ್ಕಾರದ ಮತ್ತು ಇತರ ನೌಕರರ ಸಂಘ ಸಂಸ್ಥೆಗಳು, ಸಾರ್ವಜನಿಕರು, ಖಾಸಗಿ ಸಂಸ್ಥೆಗಳು ಮತ್ತು ಇತರ ಸಂಘ ಸಂಸ್ಥೆಗಳು ಸ್ವಪ್ರೇರಣೆಯಿಂದ ನೀಡಿದ ಉದಾರ ಕೊಡುಗೆಗಳಿಗಾಗಿ ಅಪಾರ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತದೆ. ಈ ಕೊಡುಗೆಗಳ ಪ್ರಮಾಣ ಗಣನೀಯ ಹಾಗೂ ಸಕಾಲಿಕ.

9. ಈಗಿನ ಸರ್ಕಾರಕ್ಕೆ, ಆಡಳಿತದಲ್ಲಿ ಸರಿಯಾದ ಆದ್ಯತೆಗಳನ್ನು ಪುನರ್‌ಸ್ಥಾಪಿಸಿ, ಅಭಿವೃದ್ಧಿ ಕಾರ್ಯಕ್ರಮಗಳನ್ನು ದೃಢವಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗಿದೆಯೆಂದು ನಮ್ಮ ಪರಿಗಣಿತ ಅಭಿಪ್ರಾಯವಾಗಿದೆ. ಸ್ವಚ್ಛ, ತಿಳಿಯಾದ ಹಾಗೂ ಜನರ ಆಶೋತ್ತರಗಳಿಗೆ ಸ್ಪಂದಿಸುವ ಆಡಳಿತವನ್ನು ನೀಡುವ ಸರ್ಕಾರದ ಗುರಿಯನ್ನು ಬಹುಮಟ್ಟಿಗೆ ಸಾಧಿಸಲಾಗಿದೆ. ಬಾಹ್ಯ ಸೆಳೆತಗಳನ್ನು ಹಾಗೂ ಒತ್ತಡಗಳನ್ನು ತೀವ್ರವಾಗಿ ಹತ್ತಿಕ್ಕಿ, ಸರ್ಕಾರಿ ನೌಕರರ ಶಕ್ತಿ ಸಾಮರ್ಥ್ಯಗಳು ರಾಜ್ಯದ ಸರ್ವಾಂಗೀಣ ಸಾಮಾಜಿಕ ಆರ್ಥಿಕ ಅಭಿವೃದ್ಧಿಗಾಗಿ, ಅದರಲ್ಲೂ ವಿಶೇಷವಾಗಿ ವಿದ್ಯುಚ್ಛಕ್ತಿ, ನೀರಾವರಿ ಕೈಗಾರಿಕೆ ಮತ್ತು ಕೃಷಿಗಳಂಥ ಪ್ರಮುಖ ವಲಯಗಳ ಅಭಿವೃದ್ಧಿಗಾಗಿ ಬಳಕೆಯಾಗುವಂತೆ ಮಾಡಲಾಗಿದೆ. ಎಲ್ಲ ಹಂತಗಳಲ್ಲೂ ಭ್ರಷ್ಟಾಚಾರದ ವಿರುದ್ಧ ಅವಿರತ ಹೋರಾಟ ನಡೆಸಲು ನನ್ನ ಸರ್ಕಾರವು ಬದ್ಧವಾಗಿದೆ. ಅಭಿವೃದ್ಧಿ ಆಧಾರಿತ ವೃತ್ತಿ ಪ್ರಾವೀಣ್ಯತೆಗೆ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಾರ್ವಜನಿಕರ ಪಾಲ್ಗೊಳ್ಳುವಿಕೆಗೆ ಪ್ರಾಶಸ್ತ್ಯ ನೀಡುವುದು ಮುಂದುವರಿಯುತ್ತದೆ.

10. ಸರ್ಕಾರದ ವಿವಿಧ ಇಲಾಖೆಗಳ ಎಲ್ಲ ಕಾರ್ಯಕ್ರಮಗಳ ಮತ್ತು ಚಟುವಟಿಕೆಗಳ ಮೇಲೆ ತಾಲ್ಲೂಕು ಮಟ್ಟದವರೆಗೂ ಕಟ್ಟುನಿಟ್ಟಿನ ಮತ್ತು ನಿಯತವಾದ ಮೇಲ್ವಿಚಾರಣೆ ನಡೆಸುವುದಕ್ಕಾಗಿ ಮುಖ್ಯಮಂತ್ರಿಗಳು ಹಾಗೂ ಸಚಿವರುಗಳು ವ್ಯಾಪಕವಾಗಿ ಪ್ರವಾಸ ಮಾಡುತ್ತಿದ್ದಾರೆ ಹಾಗೂ ನಿಯತಕಾಲಿಕ ಪರಿಶೀಲನೆ ನಡೆಸುವ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿದ್ದಾರೆ. ಆಡಳಿತವನ್ನು ಚುರುಕುಗೊಳಿಸುವ ಈ ಪ್ರಯತ್ನದ ಜೊತೆಗೆ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ, ಪ್ರತಿಯೊಬ್ಬ ಸಚಿವರ ಆಡಳಿತಕ್ಕೊಳಪಡುವ ಸಚಿವಾಲಯದ ಇಲಾಖೆಗಳೂ ಸೇರಿದಂತೆ ಎಲ್ಲ ಹಂತಗಳ ಸರ್ಕಾರಿ ಕಚೇರಿಗಳಲ್ಲಿ ಕಡತ ವಿಲೇವಾರಿಯ ತಪಾಸಣಾ ಕಾರ್ಯ ನಿರಂತರವಾಗಿ ನಡೆಯುತ್ತಿದೆ ಎಂಬುದನ್ನು ನಾನು ಇಲ್ಲಿ ಉಲ್ಲೇಖಿಸುತ್ತೇನೆ. ಸಚಿವ ಸಂಪುಟವೇ ಇಂಥ ಪರಿಶೀಲನೆಗಳನ್ನು ನಿಯತಕಾಲಿಕವಾಗಿ ನಡೆಸುತ್ತಿದೆ. ಇಂಥ ಪ್ರಯತ್ನಗಳು ವಿವಿಧ ಹಂತಗಳಲ್ಲಿ ಬಾಕಿ

ಇರುವ ಸರ್ಕಾರಿ ಕೆಲಸದ ಪ್ರಮಾಣವನ್ನು ಗಣನೀಯವಾಗಿ ಕಡಿಮೆ ಮಾಡುವಲ್ಲಿ ನಿರೀಕ್ಷಿತ ಫಲಿತಾಂಶಗಳನ್ನು ನೀಡಿದೆ.

11. 1993ನೇ ಸಾಲಿನಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಒಟ್ಟಾರೆ ಪರಿಸ್ಥಿತಿಯು ಬಹುತೇಕ ಶಾಂತಿಯುತವಾಗಿತ್ತು. ಆದರೂ, ಅಲ್ಲಲ್ಲಿ ಕೆಲವು ಕೋಮು ಗಲಭೆಗಳು ಸಂಭವಿಸಿದವು. ರಾಜ್ಯದಲ್ಲಿ ಅಪರಾಧಗಳಿಗೆ ಸಂಬಂಧಿಸಿದಂತೆ ಪರಿಸ್ಥಿತಿಯು ಎಂದಿನಂತೆ ಉತ್ಕಟವಾಗದೇ ಉಳಿದಿದೆ. ವಿಶೇಷವಾಗಿ ದಲಿತರ ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ನಿಯಂತ್ರಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಪೋಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

12. ಸರ್ಕಾರವು ಪೋಲೀಸ್ ಇಲಾಖೆಯನ್ನು ಬಲಪಡಿಸಲು ಕ್ರಮ ಕೈಕೊಂಡಿದೆ. 1993ರಲ್ಲಿ ರಾಜ್ಯದಲ್ಲಿ ಒಟ್ಟು 4 ಹೊಸ ಕೆ.ಎಸ್.ಆರ್.ಪಿ. ಬೆಟಾಲಿಯನ್‌ಗಳಿಗೆ ಮತ್ತು 31 ಹೊಸ ಪೋಲೀಸ್ ಠಾಣೆಗಳಿಗೆ ಮಂಜೂರಾತಿ ನೀಡಲಾಗಿದೆ. 1993-94ರಲ್ಲಿ ಒಟ್ಟು 130 ಪೋಲೀಸ್ ಠಾಣೆಗಳಿಗೆ ಹೆಚ್ಚಿನ ಸಿಬ್ಬಂದಿಯನ್ನು ಒದಗಿಸಲಾಗಿದೆ. ಅಲ್ಲದೆ, ನಗರಗಳಲ್ಲಿ ಹಾಗೂ ದೊಡ್ಡ ಪಟ್ಟಣಗಳಲ್ಲಿರುವ ಪ್ರತಿಯೊಂದು ಪೋಲೀಸ್ ಠಾಣೆಯಲ್ಲಿ ಮಹಿಳಾ ಪೋಲೀಸ್ ಅಧಿಕಾರಿಗಳನ್ನು ನೇಮಿಸಲು ಈಗಾಗಲೇ ಕ್ರಮ ಕೈಕೊಳ್ಳಲಾಗಿದೆ. ಬೆಂಗಳೂರಿನಲ್ಲಿ ಪೂರ್ತಿಯಾಗಿ ಮಹಿಳಾ ಪೋಲೀಸರೇ ಇರುವ ಠಾಣೆಯೊಂದನ್ನು ನಾವು ಮಂಜೂರು ಮಾಡಿದ್ದೇವೆ. ಇದೇ ರೀತಿ, 1994-95ನೇ ಸಾಲಿನಲ್ಲಿ ಪೂರ್ತಿಯಾಗಿ ಮಹಿಳಾ ಪೋಲೀಸರೇ ಇರುವ ಠಾಣೆಗಳನ್ನು ಎಲ್ಲ ಜಿಲ್ಲಾ ಕೇಂದ್ರಗಳಿಗೂ ಮಂಜೂರು ಮಾಡಲಾಗುವುದು. ವರದಕ್ಷಿಣೆ ಕಿರುಕುಳದ ಹಾಗೂ ವರದಕ್ಷಿಣೆಗೆ ಸಂಬಂಧಿಸಿದ ಮರಣ ಪ್ರಕರಣಗಳ ಬಗ್ಗೆ ವ್ಯವಹರಿಸಲು ಸಿ.ಓ.ಡಿ. ಮಹಿಳಾ ಪೋಲೀಸ್ ಅಧಿಕಾರಿಗಳಿರುವ ವಿಶೇಷ ಘಟಕವೊಂದನ್ನು ರಚಿಸಲಾಗಿದೆ. ನನ್ನ ಸರ್ಕಾರವು ರಾಷ್ಟ್ರೀಯ ಪೋಲೀಸ್ ಆಯೋಗದ ಪ್ರಮುಖ ಶಿಫಾರಸುಗಳನ್ನು 1994-95ರಲ್ಲಿ ಕಾರ್ಯಗತಗೊಳಿಸಲು ಯೋಜಿಸಿದೆ ಹಾಗೂ 1995-96ರ ವೇಳೆಗೆ ಈ ಶಿಫಾರಸುಗಳ ಅನುಷ್ಠಾನ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಈ ಸಾಧನೆಯಲ್ಲಿ ನಮ್ಮ ರಾಜ್ಯವೇ ರಾಷ್ಟ್ರದಲ್ಲಿ ಮೊದಲನೆಯದಾಗುವುದು.

13. ಸಮಾಜದ ದುರ್ಬಲ ವರ್ಗಗಳ ಸಂರಕ್ಷಣೆಗಾಗಿ ಗೃಹರಕ್ಷಕ ದಳದ ಸೇವೆಯನ್ನು ವಿಸ್ತರಿಸುವ ಸಾಧ್ಯತೆಗಳನ್ನು ಪರಿಶೀಲಿಸಲಾಗುತ್ತಿದೆ. 1993ರಲ್ಲಿ 9 ಹೊಸ ಅಗ್ನಿಶಾಮಕ ಠಾಣೆಗಳನ್ನು ಮಂಜೂರುಮಾಡಲಾಗಿದ್ದು, 1994-95ನೇ ಸಾಲಿಗೆ ಇನ್ನೂ 20 ಅಗ್ನಿಶಾಮಕ ಠಾಣೆಗಳನ್ನು ಮಂಜೂರು ಮಾಡಲಾಗಿದೆ. ಹಂತಹಂತವಾಗಿ ಎಲ್ಲಾ ತಾಲ್ಲೂಕು ಮಟ್ಟಗಳಲ್ಲಿ ಸಣ್ಣ ಅಗ್ನಿಶಾಮಕ ಠಾಣೆಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

14. ಭಾರತ ಸಂವಿಧಾನದ 73ನೆಯ ತಿದ್ದುಪಡಿಯ ಎಲ್ಲ ಪ್ರಮುಖ ಅಂಶಗಳನ್ನು ಒಳಗೊಂಡಂಥ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ಎಂಬ ಶಾಸನವನ್ನು ಜಾರಿಗೊಳಿಸುವಲ್ಲಿ ನನ್ನ ಸರ್ಕಾರವು ದೇಶದಲ್ಲೇ ಪ್ರಪ್ರಥಮವೆಂಬುದು ಹೆಮ್ಮೆಯ ವಿಷಯ. ಪಂಚಾಯತ್‌ರಾಜ್ ಸಂಸ್ಥೆಗಳ ಎಲ್ಲ ಮೂರು ಹಂತಗಳು ಅಂದರೆ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಹಂತಗಳ ಒಟ್ಟು ಸ್ಥಾನಗಳ ಪೈಕಿ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡಗಳಿಗೆ ಶೇಕಡ 23ರ ಮೀಸಲಾತಿಯಲ್ಲದೆ, ಹಿಂದುಳಿದವರ್ಗಗಳಿಗೆ ಶೇಕಡ 33 ಮತ್ತು ಮಹಿಳೆಯರಿಗೆ ಶೇಕಡ 33ಕ್ಕೆ ಕಡಿಮೆ ಇಲ್ಲದಂತೆ ಮೀಸಲಾತಿಯನ್ನು ಶಾಸನಬದ್ಧಗೊಳಿಸಿರುವ ಪ್ರಥಮ ರಾಜ್ಯವಾಗಿದೆ. ಪರಿಶಿಷ್ಟ ಜಾತಿ: ಪರಿಶಿಷ್ಠ ಪಂಗಡ: ಹಿಂದುಳಿದ ವರ್ಗಗಳಿಗೆ ಮತ್ತು ಮಹಿಳೆಯರಿಗೆ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಸ್ಥಾನಗಳಲ್ಲಿ ಇದೇ ರೀತಿಯ ಮೀಸಲಾತಿ

ಅವಕಾಶವನ್ನು ಕಲ್ಪಿಸಲಾಗಿದೆ. ಹೊಸ ಅಧಿನಿಯಮದ ಮೇರೆಗೆ ಇಡೀ ರಾಷ್ಟ್ರದಲ್ಲಿಯೇ ನಮ್ಮ ರಾಜ್ಯವು ಮೊಟ್ಟಮೊದಲ ಬಾರಿಗೆ ಗ್ರಾಮ ಪಂಚಾಯತಿಗಳಿಗೆ ಚುನಾವಣೆಗಳನ್ನು ನಡೆಸಿದೆ. ಅತ್ಯಧಿಕ ಸಂಖ್ಯೆಯ ಜನರು ಅತ್ಯಂತ ಶಾಂತ ಮತ್ತು ವ್ಯವಸ್ಥಿತ ರೀತಿಯಲ್ಲಿ ತಮ್ಮ ಮತ ಚಲಾಯಿಸಿ, 5,641 ಗ್ರಾಮ ಪಂಚಾಯತಿಗಳಿಗೆ 80,631 ಸದಸ್ಯರನ್ನು ಚುನಾಯಿಸಿರುವುದು, ಗ್ರಾಮ ಮಟ್ಟದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಇಟ್ಟಿರುವ ವಿಶ್ವಾಸವನ್ನು ಮತ್ತೊಮ್ಮೆ ದೃಢಪಡಿಸಿದೆ. ಒಟ್ಟು ಚುನಾಯಿತ ಸದಸ್ಯರ ಪೈಕಿ ಶೇಕಡಾ 44ರಷ್ಟು ಸದಸ್ಯರು ಮಹಿಳೆಯರು ಮತ್ತು ಶೇಕಡಾ 32ರಷ್ಟು ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಗಳಿಗೆ ಸೇರಿದವರಾಗಿದ್ದಾರೆ ಎಂಬುದು ಮಾನ್ಯ ಸದಸ್ಯರೆಲ್ಲರಿಗೂ ಸಂತಸ ತಂದೀತು. ನನ್ನ ಸರ್ಕಾರವು ಸದ್ಯದಲ್ಲಿಯೇ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳಿಗೆ ಚುನಾವಣೆಗಳನ್ನು ಪೂರ್ಣಗೊಳಿಸಲು ಕ್ರಮ ಕೈಕೊಂಡಿದೆ.

15. ಕಳೆದ ಒಂದು ವರ್ಷದ ಅವಧಿಯಲ್ಲಿನ ಪ್ರಮುಖ ಸಾಧನೆಗಳ ಬಗ್ಗೆ ಹಾಗೂ ಮುಂಬರುವ ವರ್ಷದಲ್ಲಿ ನನ್ನ ಸರ್ಕಾರದ ಕಾರ್ಯನೀತಿಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಸ್ಥೂಲವಾಗಿ ನಿರೂಪಿಸುತ್ತಾ ನಮ್ಮ ಆಡಳಿತದ ಕೆಲವೊಂದು ಪ್ರಮುಖ ಕ್ಷೇತ್ರಗಳ ಬಗ್ಗೆ ತಿಳಿಸಬಯಸುತ್ತೇನೆ.

16. ನನ್ನ ಸರ್ಕಾರವು ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ರೂಪಿಸಿರುವ 15 ಅಂಶಗಳ ಕಾರ್ಯಕ್ರಮದ ಅನುಷ್ಠಾನಕ್ಕೆ ಅತಿ ಹೆಚ್ಚು ಪ್ರಾಮುಖ್ಯತೆ ನೀಡುವ ಕಾರ್ಯನೀತಿಯನ್ನು ಮುಂದುವರಿಸಿದೆ. ಇತ್ತೀಚೆಗೆ, ಅಲ್ಪಸಂಖ್ಯಾತರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳ ರಕ್ಷಣೆಗೆ ಸರ್ಕಾರವು ವ್ಯಾಪಕ ಕ್ರಮಗಳನ್ನು ಕೈಗೊಂಡಿದೆ. ರಾಜ್ಯ ಅಲ್ಪಸಂಖ್ಯಾತ ಆಯೋಗವು ಪ್ರಸ್ತುತ, ಮನೆ ಮನೆಗೆ ಹೋಗಿ ಅಲ್ಪ ಸಂಖ್ಯಾತರ ಸಾಮಾಜಿಕ - ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷಾ ಕಾರ್ಯವನ್ನು ನಡೆಸುತ್ತಿದೆ. ಇದು ರಾಷ್ಟ್ರದಲ್ಲಿಯೇ ಪ್ರಪ್ರಥಮ ಸಾಧನೆಯಾಗಿದೆ. ಈ ಸಮೀಕ್ಷೆಗಳನ್ನು ಆಧರಿಸಿ ಅಲ್ಪಸಂಖ್ಯಾತರ ಸಾಮಾಜಿಕ - ಆರ್ಥಿಕ ಅಭಿವೃದ್ಧಿಗಾಗಿ ವ್ಯಾಪಕ ಯೋಜನೆಯನ್ನು ರೂಪಿಸಲಾಗುವುದು. ನನ್ನ ಸರ್ಕಾರವು 1994-95ನೇ ಸಾಲಿನಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸುವುದನ್ನು ಪ್ರಾರಂಭಿಸಲು ಉದ್ದೇಶಿಸಿದೆ. ಅಲ್ಲದೆ, ರಾಜ್ಯ ಅಲ್ಪಸಂಖ್ಯಾತರ ಆಯೋಗಕ್ಕೆ ಶಾಸನಬದ್ಧ ಸ್ಥಾನಮಾನ ನೀಡುವ ದಿಸೆಯಲ್ಲಿ ಸಹ ರಾಜ್ಯ ಸರ್ಕಾರವು ಕ್ರಮಗಳನ್ನು ಕೈಗೊಳ್ಳುತ್ತಿದೆ.

17. ನನ್ನ ಈ ಹಿಂದಿನ ಭಾಷಣದಲ್ಲಿ ತಿಳಿಸಿರುವಂತೆ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಕಾರ್ಯಗತಗೊಳಿಸಿರುವಂಥ ಸ್ವಾವಲಂಬನಾ ಯೋಜನೆಯಡಿಯಲ್ಲಿ ಅಲ್ಪಸಂಖ್ಯಾತರಿಗೆ ಉತ್ತಮ ಆರ್ಥಿಕ ಅವಕಾಶಗಳನ್ನು ಒದಗಿಸಲು ನಮ್ಮ ಪ್ರಯತ್ನಗಳನ್ನು ಕೇಂದ್ರೀಕರಿಸಿದ್ದೇವೆ. 1993-94ರಲ್ಲಿ 4,500 ಫಲಾನುಭವಿಗಳಿಗೆ ಮೂಲ ಬಂಡವಾಳವನ್ನಾಗಿ ಒದಗಿಸಲು 250 ಲಕ್ಷ ರೂಪಾಯಿಗಳನ್ನು ಮೀಸಲಿಟ್ಟಿದೆ. 31-12-1993ರ ತನಕ 1946 ಫಲಾನುಭವಿಗಳಿಗೆ 83.37 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆಯಲ್ಲದೆ, ಬ್ಯಾಂಕುಗಳು ಇನ್ನು 309.92ಲಕ್ಷ ರೂಪಾಯಿಗಳನ್ನು ಒದಗಿಸಿದೆ. ಫಲಾನುಭವಿಗಳಿಗೆ ಒಟ್ಟು 392.59 ಲಕ್ಷ ರೂಪಾಯಿ ದೊರೆಯುವಂತೆ ಮಾಡಲಾಗಿದೆ.

18. ಸಮಾಜ ಕಲ್ಯಾಣ ಕ್ಷೇತ್ರದಲ್ಲಿ ನನ್ನ ಸರ್ಕಾರವು ಸರ್ಕಾರಿ ಸೇವೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ನ್ಯಾಯೋಚಿತ ಮತ್ತು ಸಾಕಷ್ಟು ಪ್ರಾತಿನಿಧ್ಯ ದೊರೆಯುವಂತೆ ಮಾಡಲು ನಿರಂತರವಾಗಿ ಪ್ರಯತ್ನಿಸುತ್ತಿದೆ. ಸರ್ಕಾರಿ ಸೇವೆಗಳ ವಿವಿಧ ವರ್ಗಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪ್ರಾತಿನಿಧ್ಯದಲ್ಲಿ ಇರುವಂಥ ಕೊರತೆಯನ್ನು ತುಂಬಲಾಗುತ್ತಿದೆ. ಕೆಲವು ಎ ಮತ್ತು ಬಿ ದರ್ಜೆ

ಹುದ್ದೆಗಳಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಪ್ರತಿಭಾವಂತ ಅಭ್ಯರ್ಥಿಗಳನ್ನು ನೇಮಕ ಮಾಡುವ ವಿಶೇಷ ಯೋಜನೆಯೊಂದು ಸಹ ಜಾರಿಯಲ್ಲಿದೆ. ಎಲ್ಲ ಇಲಾಖೆಗಳಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಿರಿಸಿದ ಖಾಲಿ ಸ್ಥಳಗಳ ಬ್ಯಾಕ್‌ಲಾಗನ್ನು ಭರ್ತಿ ಮಾಡುವ ಉದ್ದೇಶಕ್ಕಾಗಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳನ್ನು ನೇಮಕ ಮಾಡುವ ಸಂಬಂಧವಾಗಿ ಇದ್ದಂಥ ನಿರ್ಬಂಧವನ್ನು ಸರ್ಕಾರವು ಸುಮಾರು ಒಂದು ದಶಕದ ತರುವಾಯ ಪೂರ್ಣವಾಗಿ ತೆಗೆದುಹಾಕಿದೆ ಮತ್ತು ನೇಮಕಗಳನ್ನು 31-3-1994ರ ವೇಳೆಗೆ ಪೂರ್ಣಗೊಳಿಸಲು ನಿರ್ಧರಿಸಿದೆ.

19. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ತಮ್ಮ ಅಗತ್ಯಗಳಿಗೆ ಬೇಕಾದ ಸಾಲ ಸೌಲಭ್ಯವನ್ನು ಪಡೆಯಲು ಅನುಕೂಲವಾಗುವಂತೆ ಅವರನ್ನು ಸಹಕಾರ ಸಂಘಗಳ ಸದಸ್ಯರನ್ನಾಗಿ ಮಾಡಿಕೊಳ್ಳಲು ಸರ್ಕಾರವು ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ಯೋಜನೆಯ ಅಡಿಯಲ್ಲಿ 1992-93ನೇ ಸಾಲಿನಲ್ಲಿ 2,53,948 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಮಾಡಿಕೊಳ್ಳಲಾಗಿದೆ. ಈ ಯೋಜನೆಯನ್ನು ಮುಂದುವರಿಸಲಾಗುತ್ತಿದೆ. ಅರಣ್ಯ ಪ್ರದೇಶಗಳಲ್ಲಿ ಮತ್ತು ಅವುಗಳ ಸುತ್ತುಮುತ್ತ ವಾಸವಾಗಿರುವ ಪರಿಶಿಷ್ಟ / ಜಾತಿ ಪರಿಶಿಷ್ಟ ಪಂಗಡಗಳ ಜನರಿಗೆ ಹೆಚ್ಚಿನ ನೆರವು ನೀಡುವುದಕ್ಕಾಗಿ 264 ಲಕ್ಷ ರೂ.ಗಳನ್ನು ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ಒದಗಿಸಲಾಗಿದೆ.

20. ಹಿಂದುಳಿದ ವರ್ಗಗಳ ಯೋಗಕ್ಷೇಮದ ಗುರಿಸಾಧನೆಯ ಬಗ್ಗೆ ನಾವು ಇನ್ನು ಮುಂದೆಯೂ ಬದ್ಧರಾಗಿರುತ್ತೇವೆ. ಈ ಉದ್ದೇಶಕ್ಕಾಗಿ ರಚಿಸಲಾಗಿರುವ ಸಚಿವ ಸಂಪುಟದ ಉಪಸಮಿತಿಯು ಹಿಂದುಳಿದ ವರ್ಗಗಳ ಮೂರನೇ ಆಯೋಗದ ವರದಿಯನ್ನು ಮಂಡಲೇ ಆಯೋಗದ ಶಿಫಾರಸುಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿ ಅದರ ವಿವಿಧ ಶಿಫಾರಸುಗಳ ವಿಶ್ಲೇಷಣೆ ನಡೆಸಿದೆ. ಎಲ್ಲ ಪಂಗಡಗಳಿಗೆ ಸೇರಿದ ದುರ್ಬಲ ವರ್ಗಗಳ ಜನರ ಸಮಸ್ಯೆಗಳನ್ನು ಮತ್ತು ತೊಂದರೆಗಳನ್ನು ಗಮನದಲ್ಲಿಟ್ಟುಕೊಂಡು ನನ್ನ ಸರ್ಕಾರವು ಆಯೋಗದ ವಿವಿಧ ಶಿಫಾರಸುಗಳ ಮೇಲೆ ಈ ವರ್ಷದಲ್ಲಿಯೇ ಒಂದು ನಿರ್ಣಯವನ್ನು ತೆಗೆದುಕೊಳ್ಳುವುದು.

21. ಪ್ರಧಾನ ಮಂತ್ರಿಗಳಾದ ಶ್ರೀ ಪಿ.ವಿ. ನರಸಿಂಹರಾವ್ ರವರು ಆರಂಭಿಸಿರುವ ಹೊಸ ಉದಾರ ಆರ್ಥಿಕ ನೀತಿಗಳು ವಿಭಿನ್ನ ಕ್ಷೇತ್ರಗಳಲ್ಲಿರುವ ಖಾಸಗಿ ಉದ್ಯಮಗಳು, ಸ್ವಂತ ಉದ್ಯೋಗ ಮುಂತಾದವುಗಳಿಗೆ ಅವಕಾಶಗಳನ್ನು ಕಲ್ಪಿಸಿಕೊಟ್ಟಿವೆ. ನನ್ನ ಸರ್ಕಾರವು ಸಧ್ಯದಲ್ಲೇ ಅರ್ಥಶಾಸ್ತ್ರಜ್ಞರನ್ನು ಒಳಗೊಂಡ ತಜ್ಞರ ಸಮಿತಿಯೊಂದನ್ನು ರಚಿಸಲಿದ್ದು, ಅದು, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು, ಹಿಂದುಳಿದ ವರ್ಗಗಳು ಮತ್ತು ದುರ್ಬಲ ವರ್ಗಗಳಿಗೆ ಸೇರಿದ ಜನರು ಹೊಸ ಉದಾರ ಆರ್ಥಿಕ ನೀತಿಯ ಅಡಿಯಲ್ಲಿ ಕಲ್ಪಿಸಲಾದ ಅವಕಾಶಗಳ ಪ್ರಯೋಜನವನ್ನು ಪಡೆಯಲು ಸಾಧ್ಯವಾಗುವಂಥ ಕ್ರಮಗಳನ್ನು ಅಧ್ಯಯನ ಮಾಡಿ ಶಿಫಾರಸು ಮಾಡುವುದು.

22. ಸರ್ಕಾರವು, ಸಣ್ಣ ಮತ್ತು ಅತಿಸಣ್ಣ ರೈತರಿಗೆ ಒಂದು ವಿಶೇಷ ನೆರವು ಕಾರ್ಯಕ್ರಮವನ್ನು ಜಾರಿಗೆ ತಂದಿದೆ. ಅದರ ಅಡಿಯಲ್ಲಿ ಬೆಳೆ ಸಾಲಗಳ ಮತ್ತು ಇತರ ಕೃಷಿ ಸಾಲಗಳ ಮೇಲೆ 1-1-1993 ಮತ್ತು 31-12-1993ರ ನಡುವೆ ವಾಯಿದೆಯ ದಿನದೊಳಗಾಗಿ ಸಾಲವನ್ನು ಪೂರ್ಣವಾಗಿ ಮರುಪಾವತಿ ಮಾಡಿಈ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಶೇ. 5ರಷ್ಟು ಬಡ್ಡಿಯ ರಿಯಾಯಿತಿಯನ್ನು ನೀಡಲಾಗುವುದು ಮತ್ತು ಈ ತನಕ ಈ ಯೋಜನೆಯ ಅಡಿಯಲ್ಲಿ 3 ಕೋಟಿ ರೂ.ಗಳ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ.

23. ನಮ್ಮ ಪ್ರಧಾನ ಮಂತ್ರಿಗಳಾದ ಶ್ರೀ ಪಿ.ವಿ. ನರಸಿಂಹರಾವ್ ರವರು ಘೋಷಿಸಿದ 3 (ಮೂರು) ಕಾರ್ಯಕ್ರಮಗಳ ಅಡಿಯಲ್ಲಿ ರಾಜ್ಯಕ್ಕೆ ನಿಗದಿಪಡಿಸಿದ ಗುರಿಯನ್ನು ಸಾಧಿಸಲು ನನ್ನ ಸರ್ಕಾರವು ನಿರ್ಧರಿಸಿದೆ. ಇವು ಮಹಿಳಾ ಸಮೃದ್ಧಿ ಯೋಜನೆ, ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆ ಮತ್ತು ಉದ್ಯೋಗ ಖಾತರಿ ಯೋಜನೆ, ಮಹಿಳಾ ಸಮೃದ್ಧಿ ಯೋಜನೆಯ ಅಡಿಯಲ್ಲಿ 50,000 ಮಹಿಳೆಯರು, ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯ ಅಡಿಯಲ್ಲಿ 2,050 ಯುವಜನರು ಒಳಗೊಳ್ಳುವಂತೆ, ಮತ್ತು ರಾಜ್ಯದ 94 ಬ್ಲಾಕ್‌ಗಳಲ್ಲಿ ದೃಢಕಾಯರಾದ ಎಲ್ಲ ವ್ಯಕ್ತಿಗಳಿಗೆ ಬಿಡುವಿನಲ್ಲಿ 100 ದಿನಗಳ ಕೆಲಸ ಒದಗಿಸುವಂತೆ ಈ ಯೋಜನೆಗಳಿಗೆ ನಿಗದಿಪಡಿಸಿದ ಗುರಿಗಳನ್ನು ಸಾಧಿಸುವ ಬಗ್ಗೆ ನಾವು ಪೂರ್ಣ ಭರವಸೆ ಹೊಂದಿದ್ದೇವೆ.

24. ಸರ್ಕಾರವು ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ನಿವೇಶನವಿಲ್ಲದ ವ್ಯಕ್ತಿಗಳಿಗೆ ಮನೆ ನಿವೇಶನಗಳನ್ನು ವಿತರಣೆ ಮಾಡುವ ಹಾಗೂ ವಿವಿಧ ಯೋಜನೆಗಳ ಅಡಿಯಲ್ಲಿ ಮನೆಗಳನ್ನು ನಿರ್ಮಾಣ ಮಾಡುವ ಹಾಲಿ ಜಾರಿಯಲ್ಲಿರುವ ಕಾರ್ಯಕ್ರಮವನ್ನು ಹೊಂದಿದೆ. ನನ್ನ ಸರ್ಕಾರವು, ನಗರ ಪ್ರದೇಶಗಳಲ್ಲಿ ಕೂಡ ಉಚಿತವಾಗಿ ನಿವೇಶನಗಳನ್ನು ಒದಗಿಸುವ ನಿರ್ಧಾರವನ್ನು ಕೈಗೊಂಡಿದೆ. 1993-94ನೇ ವರ್ಷಾವಧಿಯಲ್ಲಿ 2 ಲಕ್ಷ ನಿವೇಶನಗಳನ್ನು ವಿತರಣೆ ಮಾಡುವ ನಿರೀಕ್ಷೆ ಇದೆ. ನನ್ನ ಸರ್ಕಾರವು, 1.25 ಲಕ್ಷ ಮನೆಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡಿದೆ. ಅವುಗಳಲ್ಲಿ ಆಶ್ರಯ ಮತ್ತು ದುರ್ಬಲ ವರ್ಗದವರಿಗಾಗಿ ಡಾ. ಅಂಬೇಡ್ಕರ್ ಜನ್ಮಶತಾಬ್ದಿಯ ಆಚರಣಾ ಕಾರ್ಯಕ್ರಮಗಳ ಮೇರೆಗೆ 31-3-1994ರ ವೃತ್ತಿಗೆ ಸುಮಾರು 80,000 ಮನೆಗಳ ನಿರ್ಮಾಣ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಲಾಗುವುದೆಂದು ನಿರೀಕ್ಷಿಸಲಾಗಿದೆ. 1994-95ನೇ ಸಾಲಿನಲ್ಲಿ ನನ್ನ ಸರ್ಕಾರವು ಈ ಕಾರ್ಯಕ್ರಮಗಳಿಗೆ ಇನ್ನೂ ಹೆಚ್ಚಿನ ಒತ್ತು ನೀಡಲಿದೆ.

25. ಭಾರತದಲ್ಲೇ ಪ್ರಥಮ ಬಾರಿಗೆ, ಕರ್ನಾಟಕದಲ್ಲಿ, ನಾವು, ಎಲ್ಲಾ ಸಾಮಾಜಿಕ - ಆರ್ಥಿಕ ವಲಯಗಳಲ್ಲಿ ಮಹಿಳೆಯರ ಅಭಿವೃದ್ಧಿಗಾಗಿ ಸಮಗ್ರ ಯೋಜನೆಯೊಂದನ್ನು ಸಿದ್ಧಪಡಿಸಿದ್ದೇವೆ. ಬಹುತೇಕ ಎಲ್ಲ ವಲಯಗಳ ಸೌಲಭ್ಯಗಳು ಮತ್ತು ರಿಯಾಯಿತಿಗಳ 1/3 ರಷ್ಟು ಭಾಗವನ್ನು ಮಹಿಳೆಯರಿಗಾಗಿ ಮೀಸಲಾಗಿಡಲು ನನ್ನ ಸರ್ಕಾರವು ನಿರ್ಧರಿಸಿದೆ. ನಮ್ಮ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನವನ್ನು ಉತ್ತಮಪಡಿಸಲು ಹಾಗೂ ಮಹಿಳೆಯರು ನಮ್ಮ ಶಕ್ತಿ ಸಾಮರ್ಥ್ಯಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳುವ ದಿಸೆಯಲ್ಲಿ ಎದುರಾಗಬಹುದಾದ ಅಡೆತಡೆಗಳನ್ನು ತೊಡೆದುಹಾಕಲು ಈ ಯೋಜನೆಯು ಅವಕಾಶಗಳನ್ನು ಕಲ್ಪಿಸುತ್ತದೆ. ಸರ್ಕಾರದ ಪ್ರತಿಯೊಂದು ಇಲಾಖೆಗೆ ಸಂಬಂಧಿಸಿದಂತೆ ಸಮಗ್ರ ಸರ್ಕಾರಿ ಆದೇಶಗಳನ್ನು ಹೊರಡಿಸಲಾಗಿದೆ. ಈ ಕಾರ್ಯಕ್ರಮಗಳನ್ನು ರೂಪಿಸಿ ನಿರಂತರವಾಗಿ ಪರಿಶೀಲಿಸಲು ರಾಜ್ಯಮಟ್ಟದಲ್ಲಿ ಒಂದು ಉನ್ನತ ಅಧಿಕಾರದ ಸಮಿತಿಯನ್ನು ರಚಿಸಲಾಗಿದೆ.

26. ಇದೇ ರೀತಿಯಾಗಿ, ಮಕ್ಕಳ ಅಭಿವೃದ್ಧಿಗೆ ಸಮಗ್ರ ಹಾಗೂ ಬಹು ವಲಯ ಯೋಜನೆಯೊಂದು ಸಿದ್ಧವಾಗುತ್ತಿದೆ. ಈ ಸಂದರ್ಭದಲ್ಲಿ, 1986ರ ಬಾಲಕರ ದುಡಿಮೆ (ರದ್ಧತಿ ಮತ್ತು ನಿಯಮಾವಳಿ) ಅಧಿನಿಯಮವನ್ನು ಮುಂಬರುವ ವರ್ಷಗಳಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ನನ್ನ ಸರ್ಕಾರವು ನಿರ್ಣಯ ತೆಗೆದುಕೊಂಡಿದೆ.

27. ರಾಜ್ಯ ಮಟ್ಟದಲ್ಲಿ ಆಡಳಿತ ಭಾಷೆಯಾಗಿ ಕನ್ನಡವನ್ನು ಸಂಪೂರ್ಣವಾಗಿ ಬಳಸುವಂತೆ ಮಾಡುವ ದೃಷ್ಟಿಯಿಂದ ಸರ್ಕಾರವು ಹಲವಾರು ಪ್ರಮುಖ ಕ್ರಮಗಳನ್ನು ಕೈಗೊಂಡಿದೆ.

1993-94ನೇ ವರ್ಷವನ್ನು ‘ಕನ್ನಡ ಜಾಗೃತಿ’ ವರ್ಷವೆಂದು ನಾವು ಘೋಷಿಸಿದ್ದೇವೆ. ಕನ್ನಡ ಮತ್ತು ಸಂಸ್ಕೃತಿಗೆ ಪ್ರತ್ಯೇಕ ಸಚಿವಾಲಯವೊಂದನ್ನು ರಚಿಸಿದ್ದು ಇತ್ತೀಚೆಗೆ ತೆಗೆದುಕೊಂಡ ಮತ್ತೊಂದು ಪ್ರಮುಖ ಕ್ರಮ. ಆಡಳಿತದಲ್ಲಿ ಕನ್ನಡದ ಬಳಕೆಯಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಹಾಗೂ ಡಾ. ಸರೋಜಿನಿ ಮಹಿಷಿ ಶಿಫಾರಸುಗಳ ಅನುಷ್ಠಾನದ ಮೇಲ್ವಿಚಾರಣೆ ನಡೆಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸಲಾಗಿದೆ. ಪ್ರಾಧಿಕಾರಕ್ಕೆ ಶಾಸನಬದ್ಧ ಸ್ಥಾನಮಾನ ನೀಡುವ ಒಂದು ವಿಧೇಯಕವನ್ನು ಈ ಅಧಿವೇಶನದಲ್ಲಿಯೇ ಸರ್ಕಾರವು ಮಂಡಿಸಲಿದೆ. ಸರ್ಕಾರದ ಮೂಲಕ ಪುಸ್ತಕಗಳ ಪ್ರಕಟಣೆ ಮತ್ತು ವಿತರಣಾ ಕಾರ್ಯಕ್ಕೆ ಕನ್ನಡ ಪುಸ್ತಕ ಪ್ರಾಧಿಕಾರವನ್ನೂ ಸಹ ಸರ್ಕಾರ ಸ್ಥಾಪಿಸಿದೆ.

28. ಸಾಮಾಜಿಕ ಸುರಕ್ಷತೆಯ ಸಮಗ್ರ ಸಮನ್ವಯ ಕಾರ್ಯಕ್ರಮದ ಮೇರೆಗೆ ಮಹಿಳೆಯರಲ್ಲಿ ಸಾಕ್ಷರತೆ ಕಡಿಮೆ ಇರುವಂಥ ಆಯ್ದ ನಾಲ್ಕು ಜಿಲ್ಲೆಗಳಾದ ರಾಯಚೂರು, ಬೆಳಗಾಂ, ಕೋಲಾರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ, ವಿಶ್ವಬ್ಯಾಂಕ್ ನೆರವಿನ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ (ಡಿಪಿಇಪಿ) ಒಂದು ಯೋಜನೆಯನ್ನು ರಾಜ್ಯ ಸರ್ಕಾರವು ಕೈಗೊಳ್ಳುತ್ತಿದೆ. ಯೋಜನಾ ವೆಚ್ಚದ ಶೇ 85ರಷ್ಟನ್ನು ವಿಶ್ವಬ್ಯಾಂಕ್ ಭರಿಸುತ್ತಿದ್ದು, ಉಳಿದ ಶೇ 15ನ್ನು ರಾಜ್ಯ ಸರ್ಕಾರವು ಭರಿಸಲಿದೆ.

29. ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವ ಕಾರ್ಯಕ್ರಮವನ್ನು ಬಲಪಡಿಸುವ ದೃಷ್ಟಿಯಿಂದ ರಾಜ್ಯ ಹಾಗೂ ಕೇಂದ್ರ ಯೋಜನೆಗಳೆರಡರ ಮೇರೆಗೂ ಪ್ರಾಥಮಿಕ ಶಾಲೆಗಳಿಗೆ ತರಗತಿ ಕೊಠಡಿಗಳು ಹಾಗೂ ಶಿಕ್ಷಕರನ್ನು ಒದಗಿಸಲು ಆದ್ಯತೆ ನೀಡಲಾಗುವುದು. 100 ಮತ್ತು ಅದಕ್ಕೂ ಹೆಚ್ಚು ವಿದ್ಯಾರ್ಥಿಗಳಿರುವ ಎಲ್ಲಾ ಕಿರಿಯ ಪ್ರಾಥಮಿಕ ಶಾಲೆಗಳಿಗೆ ಮೂರನೇ ಶಿಕ್ಷಕ ಹಾಗೂ ಮೂರನೇ ತರಗತಿ ಕೊಠಡಿ ಒಗಿಸುವ ಪರಿಷ್ಕೃತ ಕಪ್ಪು ಹಲಗೆ ಯೋಜನೆ ಮೇರೆಗೆ, 164 ಬ್ಲಾಕ್‌ಗಳಲ್ಲಿ 2,769 ತರಗತಿ ಕೊಠಡಿಗಳನ್ನು ನಿರ್ಮಿಸಲಾಗುವುದು ಹಾಗೂ 2,769 ಶಿಕ್ಷಕರನ್ನು ಮೂರನೇ ಶಿಕ್ಷಕರಾಗಿ ನೇಮಿಸಲಾಗುವುದು. ಹಾಗೆಯೇ, ಈ ಎಲ್ಲಾ ಶಾಲೆಗಳಿಗೆ ಸಾಧನಸಾಮಗ್ರಿಗಳನ್ನು ಒದಗಿಸಲಾಗುವುದು. ಇದೇರ ಅಂದಾಜು ಒಟ್ಟು ವೆಚ್ಚ 21.60 ಕೋಟಿ ರೂಪಾಯಿಗಳು. ಇದೇರ ಜೊತೆಗೆ, ರಾಜ್ಯ ಯೋಜನೆಗಳ ಮೇರೆಗೆ 1993-94ರಲ್ಲಿ 12,000 ಹೆಚ್ಚಿನ ಶಾಲಾ ಕೊಠಡಿಗಳನ್ನು ಪೂರ್ಣಗೊಳಿಸಲು ಯೋಜಿಸಲಾಗಿದ್ದು 5,000 ಹೆಚ್ಚಿನ ಶಿಕ್ಷಕರನ್ನು ನೇಮಕ ಮಾಡಲು ಯೋಜಿಸಲಾಗಿದೆ. 1994-95ರಲ್ಲಿ, ಇಂತಹವೇ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲಾಗುವುದು.

30. ಈ ಹಿಂದೆಯೇ ಆಶ್ವಾಸನೆ ನೀಡಿರುವಂತೆ 1994-95ರೊಳಗೆ ಎಲ್ಲಾ ಜಿಲ್ಲೆಗಳನ್ನು ಸಂಪೂರ್ಣ ಸಾಕ್ಷರತಾ ಆಂದೋಲನದ ವ್ಯಾಪ್ತಿಗೆ ತರಲಾಗುವುದು. ಇದರ ಜೊತೆಗೆ, ಈ ಆಂದೋಲನದ ಸಲುವಾಗಿ ಮಾಡಲಾದ ಅಗಾಧ ಪ್ರಯತ್ನಗಳನ್ನು ಪುಷ್ಟೀಕರಿಸುವ ದೃಷ್ಟಿಯಿಂದ, ಪ್ರತಿಯೊಂದು ಸಾಕ್ಷರತಾ ಆಂದೋಲನಕ್ಕೆ ಸಾಕ್ಷರತಾ ತರುವಾಯದ ಸಮರ್ಥ ಕಾರ್ಯಕ್ರಮವೊಂದನ್ನು ಕಲ್ಪಿಸಲಾಗುವುದು.

31. ಮಾರಾಟಯೋಗ್ಯ ಸರಕುಗಳನ್ನು ತಯಾರಿಸುವ ಸಾಮಾನ್ಯ ಕೌಶಲದಲ್ಲಿ ತರಬೇತಿ ನೀಡಲು ಉತ್ಪಾದಕತೆಯನ್ನು ಹೆಚ್ಚಿಸುವಲ್ಲಿ ವೃತ್ತಿಪರ ಅಭಿರುಚಿ ಮತ್ತು ಮನೋಭಾವವನ್ನು ಮೂಡಿಸಲು ಮತ್ತು ಕಾಯಕ ಸಂಸ್ಕೃತಿಗೆ ಸಂಬಂಧಿಸಿದ ಆರೋಗ್ಯಕರ ಜೀವನಮೌಲ್ಯಗಳನ್ನು ರೂಢಿಸಿಕೊಳ್ಳಲು ಕೇಂದ್ರ ನೆರವಿನೊಂದಿಗೆ ರಾಜ್ಯದಲ್ಲಿ 100 ಆಯ್ದ ಶಾಲೆಗಳಲ್ಲಿ ಪ್ರಾಯೋಗಿಕ ಆಧಾರದ ಮೇಲೆ ಲೋಯರ್ ಸೆಕೆಂಡರಿ ಹಂತದಲ್ಲಿ ವೃತ್ತಿ ಶಿಕ್ಷಣ ನೀಡುವುದಕ್ಕೆ ಮೊದಲು ನೀಡುವಂಥ ಶಿಕ್ಷಣ ಕ್ರಮವನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ.

32. ಪ್ರಾಥಮಿಕ ಶಾಲೆ ಮತ್ತು ಸೆಕೆಂಡರಿ ಶಾಲೆಗಳೆರಡರಲ್ಲೂ ಮಕ್ಕಳು ಮಧ್ಯದಲ್ಲೇ ಶಾಲೆಯನ್ನು ಬಿಟ್ಟುಬಿಡುವ ಸಂದರ್ಭಗಳಿಗೆ ಸಂಬಂಧಿಸಿದಂತೆ ಇತ್ತೀಚೆಗೆ ನಾವು ಕೆಲವು ಸುಧಾರಣೆಗಳನ್ನು ಮಾಡಲು ಸಾಧ್ಯವಾಗಿದ್ದರೂ ಇಂಥ ಪ್ರಕರಣಗಳು ರಾಜ್ಯದಲ್ಲಿ ಈಗಲೂ ಮುಂದುವರಿಯುತ್ತಲೇ ಇವೆ. ಕೆಲವು ಖಾಸಗಿ ವ್ಯಕ್ತಿಗಳ ಮತ್ತು ಸಂಸ್ಥೆಗಳ ಸಹಯೋಗದೊಂದಿಗೆ, ಹೀಗೆ ಮಧ್ಯದಲ್ಲಿ ಶಾಲೆಯನ್ನು ಬಿಟ್ಟುಬಿಡುವ ಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡಲು ಮತ್ತು ಈ ಮಟ್ಟದಲ್ಲಿ ಸಾಮಾನ್ಯವಾಗಿ ಶಾಲೆ ಬಿಡುವ ಮಕ್ಕಳಿಗೆ ಸೂಕ್ತ ಪ್ರೋತ್ಸಾಹಗಳನ್ನು ಮತ್ತು ಬದಲಿ ವ್ಯವಸ್ಥೆಗಳನ್ನು ಒದಗಿಸಲು ನನ್ನ ಸರ್ಕಾರವು ಉದ್ದೇಶಿಸಿದೆ. ಈ ಯೋಜನೆಯನ್ನು 'ಪುನರಾರಂಭ' ಎಂದು ಕರೆಯಲಾಗುವುದು. ಈ ಸಂದರ್ಭದಲ್ಲಿ ನನ್ನ ಸರ್ಕಾರವು ಇತ್ತೀಚೆಗೆ, ಶಾಲೆ ಬಿಡುವ ಪ್ರಮಾಣವನ್ನು ಕಡಿಮೆ ಮಾಡಲು ಮತ್ತು ಅಂಥ ಮಕ್ಕಳಿಗೆ ಸಾಕಷ್ಟು ಪೌಷ್ಟಿಕ ಆಹಾರವನ್ನು ಒದಗಿಸಲು ಪ್ರೋತ್ಸಾಹ ನೀಡುವ ದಿಸೆಯಲ್ಲಿ, ಪ್ರಾಥಮಿಕ ಶಾಲಾ ಮಕ್ಕಳಿಗೆ ಹಾಲು ಪೂರೈಕೆ ಮಾಡುವ 'ಕ್ಷೀರ' ಯೋಜನೆಯನ್ನು ಜಾರಿಗೆ ತಂದಿದೆ ಎಂದು ತಿಳಿಸಲು ನನಗೆ ಸಂತೋಷವಾಗುತ್ತದೆ.

33. ಹಾಗೆಯೇ ರಾಜ್ಯದಲ್ಲಿ ವಿವಿಧ ವಿಷಯಗಳ ಪದವೀಧರರಲ್ಲಿ ಬೆಳೆಯುತ್ತಿರುವ ನಿರುದ್ಯೋಗ ಸಮಸ್ಯೆಯ ಬಗ್ಗೆ ನನ್ನ ಸರ್ಕಾರವು ಕಳಕಳಿ ಹೊಂದಿದೆ. ಅವರಲ್ಲಿ ಬಹಳಷ್ಟು ಜನರು ಸಾಕಷ್ಟು ಕಾಲದಿಂದ ನಿರುದ್ಯೋಗಿಗಳಾಗಿದ್ದಾರೆ. ಈ ಪ್ರವೃತ್ತಿಯನ್ನು ತಡೆಗಟ್ಟಲು ಹಾಗೂ ಈ ಪದವೀಧರರು ಅಗತ್ಯ ಕೌಶಲ್ಯಗಳನ್ನು ರೂಢಿಸಿಕೊಳ್ಳುವಂತೆ ಮಾಡಲು ನನ್ನ ಸರ್ಕಾರವು ಅವರಿಗೆ ಹೊಸ ಕೌಶಲ್ಯವನ್ನು ಮೂಡಿಸುವುದೂ ಸೇರಿದಂತೆ ಮರು ತರಬೇತಿ ನೀಡಲು ಉದ್ದೇಶಿಸಿದೆ. ಈ ಯೋಜನೆಯನ್ನು 'ಪುನಶ್ಚೇತನ' ವೆಂದು ಕರೆದು ರಾಜ್ಯದಲ್ಲಿರುವ ವಿಶ್ವವಿದ್ಯಾನಿಲಯಗಳ ಸಹಕಾರದೊಂದಿಗೆ ಇದನ್ನು ಕಾರ್ಯಗತಗೊಳಿಸಲಾಗುವುದು. ವಿಶ್ವವಿದ್ಯಾನಿಲಯಗಳಿಂದ ಪದವಿ ಪಡೆಯುವ ವಿದ್ಯಾರ್ಥಿಗಳಿಗೆ ಅದೇ ಸಮಯದಲ್ಲಿ, ಸರಿಯಾದ ಕೌಶಲ್ಯ ಮತ್ತು ಜ್ಞಾನವನ್ನು ನೀಡುವುದರಲ್ಲಿ ಆಯಾಯ ವಿಶ್ವವಿದ್ಯಾನಿಲಯಗಳ ಕಾರ್ಯ ನಿರ್ವಹಣೆಯನ್ನು ಮೌಲ್ಯಮಾಪನ ಮಾಡಲು ವಿಶೇಷ ಘಟಕಗಳನ್ನು ಸ್ಥಾಪಿಸಲಾಗುವುದು. ಈ ಕಾರ್ಯಕ್ರಮವನ್ನು 'ಅವಲೋಕನ'ವೆಂದು ಕರೆದು 1994-95ನೇ ಸಾಲಿನಲ್ಲಿ ಪ್ರಾರಂಭಿಸಲಾಗುವುದು.

34. ಸಾರ್ವಜನಿಕ ಆರೋಗ್ಯದ ಸಂಬಂಧದಲ್ಲಿ, ವಿದೇಶಿ ನೆರವು ಪಡೆದುಕೊಳ್ಳುವ ಕೆಲವು ಯೋಜನೆಗಳೂ ಸೇರಿದಂತೆ ಹಲವಾರು ಭಾರೀ ಯೋಜನೆಗಳ ಮೂಲಕ ಪ್ರಾಥಮಿಕ, ಸೆಕೆಂಡರಿ ಮತ್ತು ತೃತೀಯ ಶ್ರೇಣಿಯ ಮಟ್ಟಗಳಲ್ಲಿ ಸಂಪೂರ್ಣ ಆರೋಗ್ಯ ಶುಶ್ರೂಷೆಯ ಮೂಲಭೂತ ಸೌಕರ್ಯಗಳನ್ನು ಪುನಃ ನವೀಕರಿಸಲು, ವಿಸ್ತರಿಸಲು ಮತ್ತು ಆಧುನೀಕರಿಸಲು ನನ್ನ ಸರ್ಕಾರವು ಹೆಚ್ಚಿನ ಆದಯತೆ ನೀಡುತ್ತದೆ. ಈ ಕ್ಷೇತ್ರದಲ್ಲಿ ನನ್ನ ಸರ್ಕಾರವು 1993-94ನೇ ಸಾಲಿನಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿದೆ. 1993-94ನೇ ಸಾಲಿನಲ್ಲಿ 82 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿದೆ ಎಂಬುದನ್ನು ತಿಳಿಯಲು ಮಾನ್ಯ ಸದಸ್ಯರಿಗೆ ಸಂತೋಷವೆನಿಸಬಹುದು. ಅಲ್ಲದೆ, 8ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಾಗಿಯೂ ಮತ್ತು 14 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸಲಾಯಿತು. ಮಿಗಿಲಾಗಿ, 5 ಆಸ್ಪತ್ರೆಗಳನ್ನು 100 ಹಾಸಿಗೆಗಳ ಆಸ್ಪತ್ರೆಗಳಾಗಿಯೂ ಮತ್ತು ಒಂದು ಆಸ್ಪತ್ರೆಯನ್ನು 50 ಹಾಸಿಗೆಗಳ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಲಾಯಿತು. ಜಯನಗರಕ್ಕೆ 500 ಹಾಸಿಗೆಗಳ ಒಂದು ಆಸ್ಪತ್ರೆಯನ್ನು ಮಂಜೂರು ಮಾಡಲಾಯಿತು ಮತ್ತು ರಾಜ್ಯದ

ವಿವಿಧ ಆಸ್ಪತ್ರೆಗಳಿಗೆ 21 ಆಂಬುಲೆನ್ಸ್‌ಗಳನ್ನು ಮಂಜೂರು ಮಾಡಲಾಯಿತು. ಅಲ್ಲದೆ, ಕನಿಷ್ಠ ಅವಶ್ಯಕತೆಗಳ ಕಾರ್ಯಕ್ರಮದಡಿಯಲ್ಲಿ ನನ್ನ ಸರ್ಕಾರವು, 100 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮತ್ತು 10 ಸಮುದಾಯ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ಮತ್ತು ಗ್ರಾಮಾಂತರ ಜನತೆಗೆ ವೈದ್ಯಕೀಯ ಮತ್ತು ಚಿಕಿತ್ಸಾ ಸೌಲಭ್ಯಗಳು ಸುಲಭವಾಗಿ ದೊರಕುವಂತಾಗಲು 35 ಸಮುದಾಯ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಉದ್ದೇಶಿಸಿದೆ.

35. ಬೆಂಗಳೂರಿನಲ್ಲಿ ಹಾಗೂ ಮೈಸೂರಿನಲ್ಲಿ ಕ್ರಮವಾಗಿ ಸಾವಿರ ಹಾಸಿಗೆಗಳುಳ್ಳ ಎರಡು 'ಸೂಪರ್ ಸ್ಪೆಷಾಲಿಟಿ' ಆಸ್ಪತ್ರೆಗಳನ್ನು ಪ್ರಾರಂಭಿಸಲು ನನ್ನ ಸರ್ಕಾರ ಉದ್ದೇಶಿಸಿದ್ದು, ಅವುಗಳ ಆರಂಭಿಕ ಕಾರ್ಯವನ್ನು ಬರುವ ವರ್ಷದಲ್ಲಿ ಕೈಗೊಳ್ಳಲಾಗುವುದು.

36. ವೈದ್ಯಕೀಯ ಶಿಕ್ಷಣ ಮತ್ತು ಇತರ ಸಂಬಂಧಪಟ್ಟ ವೃತ್ತಿ ಶಿಕ್ಷಣಗಳಿಗೆ ಪ್ರವೇಶಗಳನ್ನು ನೀಡುವುದಕ್ಕೆ ಸಂಬಂಧಿಸಿದ ಕಾರ್ಯವನ್ನು ಸುಗಮವಾಗಿ ಹಾಗೂ ನ್ಯಾಯೋಚಿತ ರೀತಿಯಲ್ಲಿ ನಡೆಸಲಾಗುವುದುದೆಂದು ನನ್ನ ಸರ್ಕಾರ ಹಿಂದಿನ ವರ್ಷ ನೀಡಿದ್ದ ವಚನವನ್ನು ಪಾಲಿಸಿದೆ. 1993-94ರ ವ್ಯಾಸಂಗ ವರ್ಷದಲ್ಲಿ ಉಚಿತ ಸೀಟುಗಳ (ಪ್ರತಿಭಾ ಸೀಟುಗಳು) ಮತ್ತು ಪಾವತಿ ಸೀಟುಗಳ ಎರಡೂ ವರ್ಗಗಳಲ್ಲಿ ಪ್ರೊಫೆಷನಲ್ ಕಾಲೇಜುಗಳುವಿದ್ಯಾ ಸಂಸ್ಥೆಗಳಲ್ಲಿನ ಒಟ್ಟು ಸೀಟುಗಳ ಶೇಕಡಾ 70ರಷ್ಟನ್ನು ಕನ್ನಡಿಗರಿಗೇ ನೀಡಲಾಗಿದೆ ಎಂಬುದನ್ನು ನಾವು ಖಚಿತಪಡಿಸಿಕೊಂಡಿದ್ದೇವೆ. ಮುಂಬರುವ ವರ್ಷದಲ್ಲಿಯೂ ಸಹ ಪ್ರವೇಶ ನೀಡುವ ವ್ಯವಸ್ಥೆಯನ್ನು ಮತ್ತಷ್ಟು ಏಕರೂಪಕ್ಕೆ ತರಲು ಎಲ್ಲ ಪ್ರಯತ್ನಗಳನ್ನು ಮಾಡಲು ನನ್ನ ಸರ್ಕಾರ ಇಚ್ಛಿಸುತ್ತದೆ. ಆ ಉದ್ದೇಶವನ್ನು ದೃಷ್ಟಿಯಲ್ಲಿಕೊಂಡು ನಾವು ಒಂದು ತಜ್ಞ ಸಮಿತಿಯನ್ನು ರಚಿಸಿದ್ದು ಅದರ ಶಿಫಾರಸ್ಸಿನಂತೆ 1994-95ರ ಅವಧಿಯಲ್ಲಿ ಹೊಸ ಶಾಸನವೊಂದನ್ನು ತರಲು ಸರ್ಕಾರ ಉದ್ದೇಶಿಸಿದೆ.

37. ಸದ್ಯ, ಗ್ರಾಮೀಣ ನೀರು ಸರಬರಾಜು ಹಾಗೂ ನೈರ್ಮಲ್ಯ ವ್ಯವಸ್ಥೆಯನ್ನು ಒದಗಿಸುವುದಕ್ಕಾಗಿ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ವಿದೇಶಿ ನೆರವಿನ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಗ್ರಾಮಗಳು ಶುಚಿಯಾಗಿ ಇರುವುದು ಅಭಿವೃದ್ಧಿಯ ಒಂದು ಪ್ರಮುಖ ಗುರಿಯೆಂದು ನಾವು ಭಾವಿಸುತ್ತೇವೆ. ಆದ್ದರಿಂದ 'ನಿರ್ಮಲಗ್ರಾಮ' ಎಂಬ ಹೊಸ ಯೋಜನೆಯಡಿಯಲ್ಲಿ ಇಡೀ ರಾಜ್ಯಾದ್ಯಂತ ಕುಡಿಯುವ ನೀರಿನ ವ್ಯವಸ್ಥೆ ಮಾತ್ರವೇ ಅಲ್ಲದೆ ಗ್ರಾಮ ನೈರ್ಮಲ್ಯೀಕರಣ ವ್ಯವಸ್ಥೆಯನ್ನು ಒಂದು ನಿರ್ದಿಷ್ಟ ಅವಧಿಯಲ್ಲಿ ಒದಗಿಸಲು ನನ್ನ ಸರ್ಕಾರ ಉದ್ದೇಶಿಸಿದೆ.

38. ಕರ್ನಾಟಕದಲ್ಲಿ ಕೈಗಾರಿಕೆ ಹಾಗೂ ಕೃಷಿ ಅಭಿವೃದ್ಧಿಯನ್ನು ಸಾಧಿಸುವ ಸಲುವಾಗಿ ನನ್ನ ಸರ್ಕಾರ ವಿದ್ಯುತ್ ವಲಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತದೆ. ಹಿಂದಿನ ನನ್ನ ಭಾಷಣದಲ್ಲಿ ಹೇಳಿದಂತೆ ವಿದ್ಯುತ್ ಯೋಜನೆಗಳಲ್ಲಿ ಖಾಸಗಿ ವಲಯದಲ್ಲಿ ಬಂಡವಾಳ ಹೂಡುವಂತೆ ನನ್ನ ಸರ್ಕಾರ ಪ್ರೋತ್ಸಾಹಿಸುತ್ತಲೇ ಬಂದಿದೆ. ವಿದೇಶಿ ಬಂಡವಾಳ ಹೂಡಿಕೆಯೊಂದಿಗೆ ಖಾಸಗಿ ವಲಯದಲ್ಲಿ 4 ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳನ್ನು ಮತ್ತು ಒಂದು ಜಲ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲು ಅನುಮತಿ ನೀಡಿದೆ. ಖಾಸಗಿ ವಲಯವು ಭಾಗವಹಿಸುವ ಸಾಂಪ್ರದಾಯಿಕವಲ್ಲದ ವಿದ್ಯುತ್ ವಲಯದಲ್ಲಿ ಮಿನಿ ಜಲವಿದ್ಯುತ್ ಯೋಜನೆಗಳ ಮತ್ತು ವಾಯುಶಕ್ತಿ ಯೋಜನೆಗಳ ಸಂಪೂರ್ಣ ಪ್ರಯೋಜನವನ್ನು ಪಡೆಯುವ ಬಗ್ಗೆ ವಿಶೇಷ ಮಹತ್ವ ನೀಡಲಾಗಿದೆ. ಅತಿಮುಖ್ಯವಾಗಿ, ವಿದ್ಯುತ್ ವಲಯದ ಸಮಸ್ಯೆಗಳನ್ನು ಸಾಮಾನ್ಯ ಮಟ್ಟಿಗೆ ಪರಿಹರಿಸಲು ನನ್ನ ಸರ್ಕಾರ ಕೆಲವು ಕ್ರಮಗಳನ್ನು ಕೈಗೊಂಡಿದೆ. ಇತ್ತೀಚಿಗೆ ತಿರುವನಂತಪುರದಲ್ಲಿ ನಡೆದ ದಕ್ಷಿಣ

ರಾಜ್ಯಗಳ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳು ಭಾಗವಹಿಸಿದ್ದರು. ಇತರ ದಕ್ಷಿಣ ರಾಜ್ಯಗಳ ಸಹಯೋಗದೊಂದಿಗೆ ಉದ್ದೇಶಿತ ದಕ್ಷಿಣ ಅನಿಲ ಗ್ರಿಡ್‌ನ ಮೂಲಕ ದಕ್ಷಿಣ ಭಾರತ ರಾಜ್ಯಗಳಿಗೆ ಕೈಗಾರಿಕಾ ಅನಿಲವನ್ನು ಸರಬರಾಜು ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಲೇ ಬಂದಿದ್ದೇವೆ. ಕೇಂದ್ರ ಸರ್ಕಾರವು ದಕ್ಷಿಣ ಅನಿಲ ಗ್ರಿಡ್‌ನ ಪರಿಕಲ್ಪನೆಗೆ ಇತ್ತೀಚೆಗೆ ತನ್ನ ತಾತ್ತ್ವಿಕ ಅನುಮೋದನೆಯನ್ನು ನೀಡಿರುವ ವಿಚಾರವನ್ನು ಸನ್ಮಾನ್ಯ ಸದಸ್ಯರಿಗೆ ತಿಳಿಸಲು ನಾನು ಹರ್ಷಿಸುತ್ತೇನೆ ಮತ್ತು ಅದನ್ನು ಕಾರ್ಯಗತಗೊಳಿಸುವ ಬಗ್ಗೆ ಸದ್ಯದಲ್ಲೇ ಕ್ರಮ ಕೈಗೊಳ್ಳಲಾಗುವುದೆಂಬ ಭರವಸೆ ನಮಗಿದೆ. ಹಾಗೆಯೇ, ಬೆಂಗಳೂರಿನಲ್ಲಿ 100 ಮೆಗಾವ್ಯಾಟ್ ಸಾಮರ್ಥ್ಯದ ಒಂದು ಗ್ಯಾಸ್ ಟರ್ಬೈನ್ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಸಾಧ್ಯವಾಗಿದೆ. ನನ್ನ ಸರ್ಕಾರವು ಕೈಗೊಂಡ ಈ ಕ್ರಮಗಳ ಪರಿಣಾಮವಾಗಿ ರಾಜ್ಯದಲ್ಲಿ ಒಟ್ಟಾರೆ ವಿದ್ಯುಚ್ಛಕ್ತಿಯ ಬೇಡಿಕೆಯನ್ನು ಮಧ್ಯಂತರ ಅವಧಿಯಲ್ಲಿ ಪೂರೈಸಲಾಗುವುದು.

39. ಕೇಂದ್ರ ಸರ್ಕಾರವು ಘೋಷಿಸಿದ, ಆರ್ಥಿಕ, ಕೈಗಾರಿಕಾ ಮತ್ತು ವ್ಯಾಪಾರ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಮುಖ ಮೂಲಭೂತ ಸುಧಾರಣಾ ನೀತಿಗಳಿಗನುಸಾರವಾಗಿ ಕರ್ನಾಟಕ ಸರ್ಕಾರವು, 1993ರಲ್ಲಿ ಹೊಸ ಕೈಗಾರಿಕಾ ನೀತಿಯನ್ನು ಮತ್ತು ಕೆಲವು ಉತ್ತೇಜಕ ಹಾಗೂ ರಿಯಾಯಿತಿ ಕ್ರಮಗಳನ್ನು ಘೋಷಿಸಿತು. ನನ್ನ ಸರ್ಕಾರವು ಕೈಗೊಂಡ ಈ ಕ್ರಮಗಳನ್ನು ದೇಶದ ಎಲ್ಲೆಡೆಯಲ್ಲಿರುವ ಕೈಗಾರಿಕೋದ್ಯಮಿಗಳು ಹಾಗೂ ವಿವಿಧ ಕೈಗಾರಿಕಾ ಮತ್ತು ವಾಣಿಜ್ಯ ಸಂಘ ಸಂಸ್ಥೆಗಳು ಉತ್ಸಾಹದಿಂದ ಸ್ವಾಗತಿಸಿವೆ.

40. ಹೊಸದಾಗಿ ಬಂಡವಾಳ ಹೂಡಲು ಆಕರ್ಷಕ, ಉತ್ತೇಜಕ ಮತ್ತು ರಿಯಾಯಿತಿಗಳನ್ನು ನೀಡುವುದಲ್ಲದೆ ನನ್ನ ಸರ್ಕಾರವು, ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಸಂಬಂಧಿಸಿದ ಕಾರ್ಯ ವಿಧಾನವನ್ನು ಏಕರೂಪಗೊಳಿಸಿ ಸರಳಗೊಳಿಸಿದೆ. ಕೈಗಾರಿಕಾ ಘಟಕಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ರಾಜ್ಯ ಹಾಗೂ ಜಿಲ್ಲಾ ಮಟ್ಟಗಳೆರಡರಲ್ಲೂ ಸಿಂಗಲ್ ವಿಂಡೋ ಏಜನ್ಸಿಗಳನ್ನು ಸೂಕ್ತ ಅಧಿಕಾರಗಳನ್ನು ಹೊಂದಿರುವ, ಅಧಿಕಾರಯುತ ಸಮಿತಿಗಳನ್ನಾಗಿ ಮಾಡಲಾಗಿದೆ.

41. ಮಂಗಳೂರಿನಲ್ಲಿ ಕರ್ನಾಟಕದ ಪ್ರಥಮ ತೈಲ ಕೇಂದ್ರವು ನಿರ್ಮಾಣವಾಗುತ್ತಿದೆ. ಇದರ ಗೊತ್ತುಪಡಿಸಿದ ಕಾರ್ಯಸಾಮರ್ಥ್ಯವನ್ನು ವರ್ಷಕ್ಕೆ 3 ದಶಲಕ್ಷ ಟನ್‌ಗಳಿಂದ 9 ದಶಲಕ್ಷ ಟನ್‌ಗಳಿಗೆ ಹೆಚ್ಚಿಸಲಾಗಿದೆ. ಇದೂ ಅಲ್ಲದೆ, ಮಂಗಳೂರಿನಲ್ಲಿ ಖಾಸಗಿ ವಲಯದ ಕಬ್ಬಿಣ ಯಂತ್ರ ಸ್ಥಾವರದ ಪ್ರಾರಂಭಿಕ ಕಾಮಗಾರಿಗಳು ನಡೆಯುತ್ತಿವೆ. ಬಳ್ಳಾರಿ ಜಿಲ್ಲೆಯ ಸೊಂಡೂರು ತಾಲ್ಲೂಕಿನ ತೋರಣಗಲ್ಲಿನಲ್ಲಿ ವರ್ಷಕ್ಕೆ ಒಂದು ದಶಲಕ್ಷ ಟನ್ ಉತ್ಪಾದನಾ ಸಾಮರ್ಥ್ಯವಿರುವ (ಮುಂದೆ ವರ್ಷಕ್ಕೆ 2.5 ದಶಲಕ್ಷ ಟನ್‌ಗಳಿಗೆ ವಿಸ್ತರಿಸಲಾಗುವುದು) ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಲು ಒಂದು ಕೈಗಾರಿಕಾ ಸಂಸ್ಥೆಯೊಡನೆ ಒಪ್ಪಂದ ಪತ್ರಕ್ಕೆ ಸಹಿ ಹಾಕಲಾಗಿದೆ. ಇದೇ ರೀತಿಯಾಗಿ, ಅಲ್ಲಿಯೇ ವರ್ಷಕ್ಕೆ ಒಂದು ದಶಲಕ್ಷ ಟನ್ ಉತ್ಪಾದನಾ ಸಾಮರ್ಥ್ಯದ ಇನ್ನೊಂದು ಕಾರ್ಖಾನೆಯನ್ನು ಸ್ಥಾಪಿಸಲಾಗುವುದು. ರಾಜ್ಯದಲ್ಲಿ ವರ್ಷಕ್ಕೆ 6 ದಶಲಕ್ಷ ಟನ್‌ಗಳಷ್ಟು ಹೆಚ್ಚುವರಿ ಸಿಮೆಂಟಿನ ಉತ್ಪಾದನಾ ಸಾಮರ್ಥ್ಯವನ್ನು ಸೃಜಿಸಲಾಗಿದೆ. ಕರ್ನಾಟಕವು ವಿದೇಶಿ ಬಂಡವಾಳ ಹೂಡಿಕೆಯನ್ನು ಸಹ ಆಕರ್ಷಿಸುತ್ತದೆ. 1994ರ ಜನವರಿ 28 ರಂದು, ಸಿಂಗಪುರದ ಪ್ರಧಾನ ಮಂತ್ರಿಗಳಾದ ಮಾನ್ಯ ಶ್ರೀ ಗೋಚೊಕ್‌ತಾಂಗ್ ರವರ ಸಮಕ್ಷಮದಲ್ಲಿ ಬೆಂಗಳೂರಿನಲ್ಲಿ “ಇನ್‌ಫರ್ಮೇಷನ್ ಟೆಕ್ನಾಲಜಿ ಪಾರ್ಕ್” ಸ್ಥಾಪನೆಗೆ ಸಂಬಂಧಿಸಿದ ಜಂಟಿ ವಲಯ ಯೋಜನೆಯು ಆರಂಭವಾಯಿತು.

42. ರೇಷ್ಮೆ ಉದ್ಯಮವು, ಸುಮಾರು 3,32,350 ಕುಟುಂಬಗಳಿಗೆ ಹಾಗೂ 27 ಲಕ್ಷ ಜನರಿಗೆ ನೇರವಾದಿ ಉದ್ಯೋಗಾವಕಾಶಗಳನ್ನು ಒದಗಿಸಿದೆ. ಈ ಪೈಕಿ ಶೇಕಡಾ 55 ರಷ್ಟು ಮಂದಿ ಮಹಿಳೆಯರು. ರೇಷ್ಮೆ ಉದ್ಯಮ ಕಾರ್ಯ ಚಟುವಟಿಕೆಗಳಲ್ಲಿ ಸುಮಾರು ಶೇಕಡಾ 60 ರಷ್ಟು ಮಹಿಳೆಯರು ತೊಡಗಿರುವುದರಿಂದ, 1994ನೇ ವರ್ಷವನ್ನು ರೇಷ್ಮೆ ಉದ್ಯಮ ಮಹಿಳಾ ವರ್ಷವೆಂದು ಘೋಷಿಸಲಾಗಿದೆ. ರೇಷ್ಮೆ ಉದ್ಯಮದಲ್ಲಿ ಮಹಿಳೆಯರು ಹೆಚ್ಚು ಹೆಚ್ಚಾಗಿ ಪಾಲುಗೊಳ್ಳುವಂತೆ ಮಾಡಲು ಈ ಬಗ್ಗೆ ಜಾಗೃತಿ, ತರಬೇತಿ, ಪ್ರಾತ್ಯಕ್ಷಿಕೆ ಮುಂತಾದವು ಸೇರಿದಂತೆ ಅನೇಕ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

43. ಕೈಮಗ್ಗ ಹಾಗೂ ಜವಳಿ ವಲಯಗಳ ಸರ್ವಾಂಗೀಣ ಅಭಿವೃದ್ಧಿಯ ಗುರಿಯನ್ನಿಟ್ಟುಕೊಂಡು, 12-8-1993ರಿಂದ ಜಾರಿಗೆ ಬರುವಂತೆ ರಾಜ್ಯ ಸರ್ಕಾರವು ಹೊಸ ಜವಳಿ ನೀತಿಯೊಂದನ್ನು ಘೋಷಿಸಿದೆ. ನೇಕಾರರ, ಅದರಲ್ಲೂ ವಿಶೇಷವಾಗಿ ಮಹಿಳಾ ನೇಕಾರರ ಪ್ರಯೋಜನಕ್ಕಾಗಿ ಅನೇಕ ಕಲ್ಯಾಣ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ವಲಯದ ಬೆಳವಣಿಗೆಗಾಗಿ ಹೆಚ್ಚಿನ ಅವಶ್ಯಕ ಉತ್ತೇಜನ ನೀಡುವುದಕ್ಕಾಗಿಯೇ ಒಂದು ಪ್ರತ್ಯೇಕ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮವನ್ನು ರಚಿಸಲು ಉದ್ದೇಶಿಸಲಾಗಿದೆ.

44. ಕರ್ನಾಟಕದಲ್ಲಿ ರಾಜ್ಯ ಸಾರ್ವಜನಿಕ ವಲಯದ ಉದ್ಯಮಗಳಿಗೆ ಹೆಚ್ಚು ಸ್ವಾಯತ್ತತೆಯನ್ನು ನೀಡಿ ಅವುಗಳ ಉಳಿವು ಮತ್ತು ಬೆಳವಣಿಗೆಗಾಗಿ ಆರೋಗ್ಯಕರವಾದ ಹಾಗೂ ಸ್ಪರ್ಧಾತ್ಮಕ ಪರಿಸರವನ್ನುಂಟುಮಾಡಬೇಕೆಂದು ಮತ್ತು ಅದೇ ರೀತಿಯಲ್ಲಿ ಪ್ರತಿಯೊಂದು ಕೈಗಾರಿಕೆಯ ಕಾರ್ಯನಿರ್ವಹಣೆಗಾಗಿ ಹೊಣೆಗಾರಿಕೆಯ ಕಟ್ಟುಪಾಡುಗಳನ್ನು ಗೊತ್ತುಪಡಿಸಬೇಕೆಂದು ನನ್ನ ಸರ್ಕಾರವು ಅಭಿಪ್ರಾಯ ಪಡುತ್ತದೆ. ಈ ಸಾರ್ವಜನಿಕ ವಲಯದ ಕೈಗಾರಿಕೆಗಳಿಗಾಗಿ ಕಾರ್ಯನಿರ್ವಹಣಾ ಮಾನದಂಡಗಳನ್ನು, ತೊಡಗಿಸಲಾದ ಬಂಡವಾಳಕ್ಕೆ ಮೊದಲೇ ನಿಗದಿಪಡಿಸಿದ ಪ್ರಮಾಣದ ಲಾಭ, ನಿರ್ದಿಷ್ಟ ವೆಚ್ಚ, ನಿಯಂತ್ರಣ ಕ್ರಮಗಳು, ಬಳಕೆ ಸಾಮರ್ಥ್ಯ ಇತ್ಯಾದಿಗಳನ್ನು ಆಧರಿಸಿ ಮೊದಲೇ ನಿರ್ಧರಿಸಬಹುದಾಗಿದೆ. ಅಭಿವೃದ್ಧಿ ಹೊಂದಲು ಸಾಮರ್ಥ್ಯ ಇರುವ ಸಾರ್ವಜನಿಕ ವಲಯದ ಉದ್ಯಮಗಳನ್ನು, ಅವುಗಳ ಮೂಲ ಬಂಡವಾಳವನ್ನು ಹೆಚ್ಚಿಸುವ ಮತ್ತು ಅಥವಾ ಪುನರ್ ವ್ಯವಸ್ಥೆಗೊಳಿಸುವ ಮತ್ತು ಅವುಗಳ ಕಾರ್ಯನಿರ್ವಹಣೆಯನ್ನು ಏಕರೂಪಗೊಳಿಸುವ ಮೂಲಕ ಪುನಶ್ಚೇತನಗೊಳಿಸಲು ಸರ್ಕಾರವು ಉದ್ದೇಶಿಸಿದೆ.

45. ನನ್ನ ಸರ್ಕಾರವು ಕೈಕೊಂಡ ಕ್ರಮಗಳ ಹಿನ್ನೆಲೆಯಲ್ಲಿ ಮತ್ತು ರಾಜ್ಯಕ್ಕೆ ಹೊಸದಾಗಿ ಬಂಡವಾಳ ಹೂಡಿಕೆಗಳು ಹರಿದು ಬಂದ ಹಿನ್ನೆಲೆಯಲ್ಲಿ ಅತಿ ಶೀಘ್ರದಲ್ಲಿಯೇ ಕರ್ನಾಟಕ ರಾಜ್ಯವು ದೇಶದಲ್ಲಿಯೇ ಅತ್ಯಂತ ಮುಂದುವರಿದ ಕೈಗಾರಿಕಾ ರಾಜ್ಯಗಳಲ್ಲಿ ಒಂದಾಗಲಿದೆ ಎಂಬ ವಿಶ್ವಾಸ ನಮಗಿದೆ. ವಾಸ್ತವವಾಗಿ, ಕೈಗಾರಿಕೆಗಳಿಗೆ ಸಂಬಂಧಿಸಿದಂತೆ, ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ದೇಶ ವಿದೇಶಗಳ ಅನೇಕ ಕೈಗಾರಿಕೋದ್ಯಮಿಗಳು ಇಚ್ಛೆಪಟ್ಟಿದ್ದಾರೆ.ಹೊಸ ಉದಾರ ನೀತಿಯನ್ನು ರೂಪಿಸುವಲ್ಲಿ ನಮ್ಮ ಪ್ರಧಾನ ಮಂತ್ರಿ ಶ್ರೀ ಪಿ.ವಿ. ನರಸಿಂಹರಾವ್ ರವರು ತೋರಿರುವ ದೂರದೃಷ್ಟಿಯನ್ನು ನನ್ನ ಸರ್ಕಾರವು ಪೂರ್ಣವಾಗಿ ಸಮರ್ಥಿಸುತ್ತದೆ ಮತ್ತು ಈ ಮಹಾನ್ ಪ್ರಯತ್ನದಲ್ಲಿ ಕರ್ನಾಟಕವು ಕೇಂದ್ರ ಸರ್ಕಾರದೊಂದಿಗೆ ಸಮಭಾಗಿಯಾಗಿ ಮುಂದುವರೆಯುತ್ತದೆ.

46. ಕೈಗಾರಿಕೆ ಮತ್ತು ವಾಣಿಜ್ಯ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಬೆಂಗಳೂರು ನಗರವು ಬೃಹತ್ ಮತ್ತು ಆಧುನಿಕ ಕೇಂದ್ರವಾಗಿ ಬೆಳೆಯುತ್ತಿರುವುದರ ಪ್ರಾಮುಖ್ಯತೆಯನ್ನು ಅದು ಮಹಾನಗರದ ಸ್ಥಾನಮಾನವನ್ನು ಪಡೆದಿರುವುದನ್ನು ಮತ್ತು ಅದರ ಕೈಗಾರಿಕೆಗಳ ರಫ್ತು ಸಾಮರ್ಥ್ಯವನ್ನು ಹಾಗೂ ಸೇವಾ ವಲಯವನ್ನು

ಮತ್ತು ಪ್ರವಾಸೋದ್ಯಮ ಅವಕಾಶಗಳನ್ನು ಪರಿಗಣಿಸಲಾಗಿ, ಈ ನಗರದಲ್ಲಿ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣವೊಂದನ್ನು ಸ್ಥಾಪಿಸುವುದು ಅತ್ಯವಶ್ಯಕವಾಗಿದೆ. 1994-95ರ ಅವಧಿಯಲ್ಲಿ ಖಾಸಗಿ ವಲಯದ ಸಹಯೋಗದೊಂದಿಗೆ ಉದ್ದೇಶಿತ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಾರ್ಯವನ್ನು ಪ್ರಾರಂಭಿಸಲು ಯೋಜಿಸಲಾಗಿದೆ. ಅದಲ್ಲದೆ, ಹೆಚ್ಚುತ್ತಿರುವ ದೇಶೀಯ ವಿಮಾನ ಸಂಚಾರ ಮತ್ತು ಭಾಗಶಃ ಅಂತರರಾಷ್ಟ್ರೀಯ ಸರಕು ಸಾಗಾಣೆಯ ವಿಮಾನ ಯಾನಕ್ಕೆ ಸ್ಥಳಾವಕಾಶ ಒದಗಿಸಲು ಈಗಿರುವ ವಿಮಾನ ನಿಲ್ದಾಣವನ್ನು ಸಹ ವಿಸ್ತರಿಸಲಾಗುತ್ತಿದೆ.

47. 1959ರ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮಕ್ಕೆ ತಿದ್ದುಪಡಿ ತರಲು ಕರಡು ವಿಧೇಯಕವನ್ನು ನನ್ನ ಸರ್ಕಾರ ಸಿದ್ಧಪಡಿಸುತ್ತಲಿದೆ. ಸಹಕಾರ ಸಂಘಗಳ ಆಡಳಿತ ಸಮಿತಿಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗೆ ಮೀಸಲಾತಿ ಸೌಲಭ್ಯ ಒದಗಿಸಲು ಮತ್ತು ಸಹಕಾರ ಸಂಘಗಳ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳನ್ನು ಸ್ಥಾಪಿಸಲು ಹಾಗೂ ಸಹಕಾರ ಸಂಘಗಳಿಗೆ ಹೆಚ್ಚಿನ ಸ್ವಾಯತ್ತತೆಯನ್ನು ನೀಡಲು ಉದ್ದೇಶಿಸಲಾಗಿದೆ.

48. ಕರ್ನಾಟಕದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ವಿಪುಲ ಅವಕಾಶವಿರುವ ಅಂಶವನ್ನು ಮನಗಂಡು ನನ್ನ ಸರ್ಕಾರವು ರಾಜ್ಯಕ್ಕೆ ಸಮಗ್ರ ಪ್ರವಾಸೋದ್ಯಮ ನೀತಿಯನ್ನು ರೂಪಿಸಲು ಕ್ರಮಗಳನ್ನು ಕೈಗೊಂಡಿದೆ. ಅಂತರಾಷ್ಟ್ರೀಯ ಗುಣಮಟ್ಟಗಳು ಮತ್ತು ಮಾನಕಗಳಿಗೆ ಸರಿಹೊಂದುವ ಮೂಲಭೂತ ಸೌಲಭ್ಯಗಳನ್ನು ಖಾಯಂ ಆಗಿ ಒದಗಿಸಲಾಗುವುದು. ಎರಡನೆಯದಾಗಿ ಸಮಾಜದ ಎಲ್ಲ ವರ್ಗಗಳು ಸರ್ಕಾರದೊಂದಿಗೆ ಪಾಲ್ಗೊಳ್ಳಲು ಸಹ ಈ ಕಾರ್ಯನೀತಿಯಲ್ಲಿ ಅವಕಾಶ ಕಲ್ಪಿಸಲಾಗುವುದು.

49. ಬೆಂಗಳೂರು ನಗರವು ಕ್ರೀಡೆಗಳು ಮತ್ತು ಆಟಗಳ ಚಟುವಟಿಕೆಗಳ ಪ್ರಮುಖ ಕೇಂದ್ರವಾಗುತ್ತಿದೆ. 1995-96ನೆಯ ವರ್ಷದ ರಾಷ್ಟ್ರೀಯ ಕ್ರೀಡಾ ಕೂಟವು ಬೆಂಗಳೂರಿನಲ್ಲಿ ನಡೆಯಲಿದೆ ಎಂದು ತಿಳಿಸಲು ನನಗೆ ಸಂತೋಷವಾಗುತ್ತದೆ.

50. 1992ರ ಸಂವಿಧಾನದ 74ನೆಯ ತಿದ್ದುಪಡಿ ಅಧಿನಿಯಮವು 1-6-1993ರಿಂದ ಜಾರಿಗೆ ಬಂದಿದೆ ಮತ್ತು ಸದರಿ ಅಧಿನಿಯಮಕ್ಕನುಸಾರವಾಗಿ ರಾಜ್ಯ ಸರ್ಕಾರವು ರಾಜ್ಯ ಪೌರಾಡಳಿತ ಕಾನೂನುಗಳನ್ನು ತಿದ್ದುಪಡಿ ಮಾಡಬೇಕಾಗಿದೆ. ತದನುಸಾರವಾಗಿ, ರಾಜ್ಯ ಪೌರಾಡಳಿತ ಕಾನೂನುಗಳಿಗೆ ಸಮಗ್ರ ತಿದ್ದುಪಡಿಗಳನ್ನು ರೂಪಿಸಲು ಮತ್ತು ಸಾಂಸ್ಥಿಕ ಮತ್ತು ಹಣಕಾಸು ನೆರವನ್ನು ಒದಗಿಸುವ ಮೂಲಕ ಅವುಗಳನ್ನು ಸಶಕ್ತ ಸಂಸ್ಥೆಗಳನ್ನಾಗಿ ಮಾಡಲು ಕ್ರಮಗಳನ್ನು ಪ್ರಾರಂಭಿಸಲಾಗಿದೆ.

51. ನನ್ನ ಸರ್ಕಾರವು ನಗರಾಭಿವೃದ್ಧಿಯನ್ನು ಒಂದು ಪ್ರಮುಖ ಕ್ಷೇತ್ರವಾಗಿ ಪರಿಗಣಿಸಿದೆ. ನಗರೀಕರಣದ ಅನಿವಾರ್ಯತೆಗೆ ಮತ್ತು ನಗರ ಪ್ರದೇಶಗಳ ಯೋಜಿತ ಬೆಳವಣಿಗೆಗೆ ನಾವು ಸಾಕಷ್ಟು ಗಮನ ಕೊಡಬೇಕಾಗಿದೆ. ನಗರ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಯೋಜನೆಯೊಂದನ್ನು ಕಾರ್ಯಗತಗೊಳಿಸುವುದಕ್ಕಾಗಿ ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಹಣಕಾಸು ನೆರವು ಪಡೆಯಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಲು ನನಗೆ ಸಂತೋಷವಾಗುತ್ತಿದೆ. ಈ ಯೋಜನೆಯ ಮೇರೆಗೆ ತುಮಕೂರು, ಮೈಸೂರು, ರಾಮನಗರ ಮತ್ತು ಚನ್ನಪಟ್ಟಣ - ಇವುಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯ ಪ್ರಕಾರ ಮೈಸೂರು ಬೆಂಗಳೂರುಗಳ ನಡುವೆ "ಎಕ್ಸ್‌ಪ್ರೆಸ್ ಹೈವೆ" ಒಂದನ್ನು ನಿರ್ಮಿಸಲು ಸಹ ಉದ್ದೇಶಿಸಲಾಗಿದೆ.

52. ಕರ್ನಾಟಕ ಸರ್ಕಾರವು ನಗರಾಭಿವೃದ್ಧಿ ಯೋಜನೆಗಳನ್ನು ರೂಪಿಸಲು ಮತ್ತು ಹಣಕಾಸು ಸಂಸ್ಥೆಗಳಿಂದ, ಕೇಂದ್ರ ಸರ್ಕಾರ ಮತ್ತು ಬಹುವಿಧ ಏಜನ್ಸಿಗಳಿಂದ

ಸಂಪನ್ಮೂಲಗಳನ್ನು ಸಂಗ್ರಹಿಸುವುದಕ್ಕಾಗಿ ಒಂದು ನಗರ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆಯನ್ನು ರಚಿಸಿದೆ. ಸದರಿ ಸಂಸ್ಥೆಯನ್ನು ಕಂಪನಿಗಳ ರಿಜಿಸ್ಟ್ರಾರ್‌ರವರಲ್ಲಿ ನೋಂದಣಿ ಮಾಡಿಕೊಳ್ಳಲಾಗಿದೆ.

53. ಭಾರತ ಸರ್ಕಾರವು ಬೆಂಗಳೂರು ನಗರವನ್ನು ಬೃಹತ್‌ನಗರ (ಮೆಗಾಸಿಟಿ) ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ಸೇರಿಸಿದೆ. ಈ ಯೋಜನೆಯ ಅಡಿಯಲ್ಲಿ ಮುಂದಿನ 5 ವರ್ಷಗಳ ಅವಧಿಯಲ್ಲಿ ಈ ಮುಂದಿನ ಚಟುವಟಿಕೆಗಳನ್ನು ಕೈಗೊಳ್ಳಲಾಗುವುದು:

ಎ) ನೀರು ಸರಬರಾಜು ವ್ಯವಸ್ಥೆಯನ್ನು ಸುಧಾರಿಸುವುದು
ಬಿ) ರಸ್ತೆ ಇಂಜನಿಯರಿಂಗ್ ಮತ್ತು ಸಾರಿಗೆ ನಿರ್ವಹಣೆ
ಸಿ) ಕೊಳಚೆ ಪ್ರದೇಶಾಭಿವೃದ್ಧಿ ಮತ್ತು ಸುಧಾರಣೆ
ಡಿ) ಸಾರ್ವಜನಿಕ ಸಾರಿಗೆಯ ಮೂಲಭೂತ ಸೌಕರ್ಯಗಳನ್ನು ಬಲಪಡಿಸುವುದು.
ಇ) ವಾಣಿಜ್ಯ ಚಟುವಟಿಕೆಗಳು
ಎಫ್) ನಾಲ್ಕು ಟ್ರಕ್‌ಟರ್ಮಿನಲ್‌ಗಳನ್ನು ಆರಂಭಿಸುವುದು
ಜಿ) ಬೀದಿದೀಪದ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು.

54. ನೆದರ್‌ಲ್ಯಾಂಡ್ ಸರ್ಕಾರದ ನೆರವಿನೊಂದಿಗೆ ಬೆಂಗಳೂರು ನಗರದಲ್ಲಿ ನಗರ ಬಡತನ ನಿವಾರಣಾ ಯೋಜನೆಯೊಂದನ್ನು ಕೈಗೊಳ್ಳಲಾಗಿದೆ. ಈ ಯೋಜನೆಯ, ಸರ್ಕಾರೇತರ ಸಂಘಟನೆಗಳ ಮೂಲಕ ಫಲಾನುಭವಿಗಳನ್ನು ಸಕ್ರಿಯವಾಗಿ ತೊಡಗಿಸುವುದರೊಂದಿಗೆ, ಬಡತನ ನಿವಾರಣೆಯೂ ಸೇರಿದಂತೆ ಕೊಳಚೆ ಪ್ರದೇಶಗಳ ಸುಧಾರಣೆಯ ಗುರಿಯನ್ನು ಹೊಂದಿದೆ.

55. ನಾವು ಕೃಷ್ಣಾಜಲಾನಯನ ಪ್ರದೇಶದಲ್ಲಿ ನೀರಾವರಿ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ಕಾರ್ಯವನ್ನು ಮುಂದುವರಿಸುತ್ತೇವೆ. ರಾಜ್ಯದ ನೀರಿನ ಪಾಲನ್ನು ಪೂರ್ಣವಾಗಿ ಬಳಸಿಕೊಳ್ಳುವುದನ್ನು ಖಾತರಿಪಡಿಸಿಕೊಳ್ಳುವುದಕ್ಕಾಗಿ ಅವುಗಳನ್ನು ಕ್ರಿ.ಶ. 2000 ಇಸವಿಯೊಳಗಾಗಿ ಪೂರ್ಣಗೊಳಿಸುವ ನಮ್ಮ ನಿರ್ಧಾರ ಅಚಲವಾಗಿದೆ. ಅಂತೆಯೇ ಕಾವೇರಿ ನೀರಿನ ನಮ್ಮ ನ್ಯಾಯಯುತ ಪಾಲು ನಮಗೆ ದೊರೆಯುವಂತೆ ಖಚಿತಪಡಿಸಿಕೊಳ್ಳುತ್ತೇವೆ.

56. ಕೃಷಿ ವಲಯದಲ್ಲಿ ಹೆಚ್ಚು ಉತ್ಪಾದನೆಯನ್ನು ಸಾಧಿಸಲು ರಾಜ್ಯ ಸರ್ಕಾರ ವಿಶೇಷ ಪ್ರಾಧಾನ್ಯತೆ ನೀಡಿರುವುದನ್ನು ನನ್ನ ಹಿಂದಿನ ಭಾಷಣದಲ್ಲಿ ಒತ್ತಿ ಹೇಳಿದ್ದೇನೆ. ರಾಜ್ಯವು 1991-92ನೇ ಸಾಲಿನಲ್ಲಿ ಸಾಧಿಸಿದ 79 ಲಕ್ಷ ಟನ್ನುಗಳ ಉತ್ಪಾದನೆಗೆ ಪ್ರತಿಯಾಗಿ 1992-93ನೇ ಸಾಲಿನಲ್ಲಿ 86 ಲಕ್ಷ ಟನ್ನುಗಳ ದಾಖಲೆ ಉತ್ಪಾದನೆಯನ್ನು ಸಾಧಿಸಿದೆ. ಅಂತೆಯೇ, 1992-93ನೇ ಸಾಲಿನಲ್ಲಿ 200 ಲಕ್ಷ ಟನ್ನುಗಳ ಕಬ್ಬು ಉತ್ಪಾದನೆಯ ಗುರಿಗೆ ಪ್ರತಿಯಾಗಿ ಅದೇ ವರ್ಷದಲ್ಲಿ 218.72 ಲಕ್ಷ ಟನ್ನುಗಳ ಉತ್ಪಾದನೆಯನ್ನು ಸಾಧಿಸಲಾಗುತ್ತಿತ್ತು. ಹತ್ತಿ ಉತ್ಪಾದನೆಯಲ್ಲಿ ಕೂಡ 8.7 ಲಕ್ಷ ಬೇಲುಗಳ ಮೂಲ ಗುರಿಗೆ ಪ್ರತಿಯಾಗಿ 10.10 ಲಕ್ಷ ಬೇಲುಗಳ ಉತ್ಪಾದನೆಯನ್ನು ಸಾಧಿಸಲಾಯಿತು. ಪ್ರಮುಖವಾಗಿ ಶೇಕಡಾ 75ರಷ್ಟು ಬೆಳೆಯ ಪ್ರದೇಶವು ಮಳೆಯ ಆಶ್ರಯದಲ್ಲಿರುವುದರಿಂದ ಜಲಾನಯನ ಪ್ರದೇಶ ನಿರ್ವಹಣೆ ರಾಜ್ಯ ಸರ್ಕಾರದ ಪ್ರಮುಖ ಆದ್ಯತೆಯ ಕಾರ್ಯಕ್ರಮವಾಗಿ ಮುಂದುವರಿದಿದೆ. ವರ್ಷಾವಧಿಯಲ್ಲಿ 1,44,000 ಹೆಕ್ಟೇರುಗಳನ್ನು ಜಲಾನಯನ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ತರುವ ಕಾರ್ಯಕ್ರಮಕ್ಕೆ ಪ್ರತಿಯಾಗಿ ನಾವು ಸುಮಾರು 1,75,000 ಹೆಕ್ಟೇರುಗಳಷ್ಟು ಪ್ರದೇಶದ ವ್ಯಾಪ್ತಿಯನ್ನು ಸಾಧಿಸಲಿದ್ದೇವೆ. ರಾಜ್ಯವು ಕೃಷಿ

ಉತ್ಪಾದನೆಯನ್ನು ವೃದ್ಧಿಗೊಳಿಸುವುದಕ್ಕೆ ಕೇಂದ್ರ ಸರ್ಕಾರ ನೀಡಿದ ಹಲವಾರು ಯೋಜನೆಗಳ ಪೂರ್ಣ ಪ್ರಯೋಜನವನ್ನು ಪಡೆಯಲು ಯೋಜನೆ ಹಾಕಿಕೊಂಡಿದೆ.

57. ನನ್ನ ಸರ್ಕಾರವು ರೈತರ ಆದಾಯ ಮಟ್ಟವನ್ನು ಸುಧಾರಿಸಲು ವಿಶೇಷ ಪ್ರಾಧಾನ್ಯತೆ ನೀಡುತ್ತಿದೆ. ಕೃಷಿ ಉತ್ಪಾದನೆಯನ್ನು ವೃದ್ಧಿಪಡಿಸುವ ಒಂದು ಕ್ರಮವಾಗಿ ಮತ್ತು ರೈತರಿಗೆ ಅವರ ಉತ್ಪನ್ನಕ್ಕೆ ಲಾಭದಾಯಕ ಬೆಲೆ ಸಿಗುವಂತಾಗಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವು ಘೋಷಿಸಿದ ಬೆಂಬಲ ಬೆಲೆಗಿಂತ ಹೆಚ್ಚಿನ ಪ್ರೋತ್ಸಾಹಕ ಬೆಲೆಯನ್ನು ಮೊದಲ ಬಾರಿಗೆ ಯಶಸ್ವಿಯಾಗಿ ಜಾರಿಗೆ ತಂದಿದೆ. ಭತ್ತಕ್ಕೆ ಕ್ವಿಂಟಾಲಿಗೆ 10. ರೂ. ಗಳಿಂದ 30 ರೂ.ಗಳವರೆಗೆ ಮತ್ತು ಜೋಳ ರಾಗಿ ಮತ್ತು ಮುಸುಕಿನ ಜೋಳಕ್ಕೆ ಕ್ವಿಂಟಾಲಿಗೆ 20 ರೂ.ಗಳವರೆಗೆ ಪ್ರೋತ್ಸಾಹ ಧನ ನೀಡಲಾಯಿತು. ಈ ಯೋಜನೆಯನ್ನು ಬಹಳ ಪರಿಣಾಮಕಾರಿ ಯೋಜನೆಯನ್ನಾಗಿ ಮಾಡುವುದಕ್ಕೆ ಭಾರತದ ಆಹಾರ ನಿಗಮದ ಸಕ್ರಿಯ ಬೆಂಬಲದೊಂದಿಗೆ ರಾಜ್ಯ ಸರ್ಕಾರವು 100 ಕ್ಕಿಂತಲೂ ಹೆಚ್ಚು ಖರೀದಿ ಕೇಂದ್ರಗಳನ್ನು ತೆರೆದಿದೆ. ರಾಜ್ಯ ಸರ್ಕಾರದ ಈ ಕ್ರಮದಿಂದ ಆಹಾರ ಧಾನ್ಯಗಳ ಹೆಚ್ಚುವರಿ ಬೆಲೆಗಳ ಸ್ಥಿರತೆಗೆ ಸಹಾಯವಾಯಿತು.

58. ನನ್ನ ಸರ್ಕಾರವು ಇತ್ತೀಚೆಗೆ "ಕರ್ನಾಟಕ ಸ್ಟೇಟ್ ಆಗ್ರೋ ಫುಡ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಅಥಾರಿಟಿ" ಯನ್ನು ರಚಿಸಿದ್ದು, ಇದು ರಾಜ್ಯದಲ್ಲಿ ಸರ್ವಾಂಗೀಣ ತೋಟಗಾರಿಕೆ ಅಭಿವೃದ್ಧಿಯಾಗುವಂತೆ ನೋಡಿಕೊಳ್ಳುವ ಒಂದು ನೋಡಲ್ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತದೆ. ತೋಟಗಾರಿಕೆ ಬೆಳೆಗಳಿಗೆ ಜಿನುಗು ನೀರಾವರಿ ವ್ಯವಸ್ಥೆಯನ್ನು ಒದಗಿಸಲು ಸರ್ಕಾರವು ಒಂದು ಬೃಹತ್ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದೆ. ಇದರ ಜೊತೆಗೆ, ರೈತರಿಗೆ ಸಸಿ ನೆಟ್ಟು ಬೆಳೆಸಲು ಅತ್ಯುತ್ತಮ ಮಟ್ಟದ ಸಾಮಗ್ರಿಗಳನ್ನು ಹಂಚಲು ಯೋಜಿಸಲಾಗಿದೆ. ಈ ಕ್ಷೇತ್ರದಲ್ಲಿ ನಡೆದಿರುವ ತಂತ್ರಜ್ಞಾನ, ಅಭಿವೃದ್ಧಿ ಹಾಗೂ ರಫ್ತು ಮಾರುಕಟ್ಟೆಯಲ್ಲಿ ದೇಶವು ಹೊಂದಿರುವ ಅಗಾಧ ಅವಕಾಶವನ್ನು ಪರಿಗಣನೆಗೆ ತೆಗೆದುಕೊಂಡು, ರಾಜ್ಯವು ವ್ಯಾಪಕ ರೀತಿಯಲ್ಲಿ 'ಗ್ರೀನ್ ಹೌಸ್'ಗಳನ್ನು ನಿರ್ಮಿಸುವ ಹಾಗೂ ಮಾರುಕಟ್ಟೆ ಕಾರ್ಯಕ್ರಮಗಳನ್ನು ಯೋಜಿಸಿದೆ.

59. ಗ್ರಾಮೀಣ ಅಭಿವೃದ್ಧಿಯ ಸಮಗ್ರ ಸಾಧನೆಗೆ ನಮ್ಮ ಹಳ್ಳಿಗಳಲ್ಲಿರುವ ಸುಶಿಕ್ಷಿತ ನಿರುದ್ಯೋಗಿ ಯುವಕರಿಗೆ ಸೂಕ್ತ ತರಬೇತಿ ನೀಡುವ ಉದ್ದೇಶದಿಂದ ಹಾಗೂ ಅವರು ಕೃಷಿ ಉದ್ಯಮಗಳೂ ಸೇರಿದಂತೆ ಉತ್ಪಾದಕ ವೃತ್ತಿಗಳಲ್ಲಿ ತೊಡಗುವುದನ್ನು ಸಾಧ್ಯವಾಗಿಸಲು ಒಂದು ಉನ್ನತ ಮಟ್ಟದ ಆಯೋಗದ ಮೂಲಕ ನಮ್ಮ ಹಳ್ಳಿಗಳಲ್ಲಿರುವ ಎಲ್ಲಾ ಸುಶಿಕ್ಷಿತ ನಿರುದ್ಯೋಗಿ ಯುವಕರ ಸಮೀಕ್ಷೆಯೊಂದನ್ನು ನಡೆಸಬೇಕೆಂದು ನನ್ನ ಸರ್ಕಾರದ ಪರಿಗಣಿತ ಅಭಿಪ್ರಾಯವಾಗಿದೆ. ಈ ಸಮೀಕ್ಷೆಯನ್ನು 1994-95ರಲ್ಲಿ ಕೈಗೆತ್ತಿಕೊಳ್ಳಲಾಗುವುದು.

60. ಕರ್ನಾಟಕದಲ್ಲಿ ರಫ್ತು ಆಧಾರಿತ ಕೃಷಿ ಉದ್ಯಮಗಳೂ ಒಳಗೊಂಡಂತೆ ಕೃಷಿ ಉದ್ಯಮಗಳಿಗೆ ತುಂಬಾ ಅವಕಾಶವಿರುವುದು ವ್ಯಕ್ತವಾಗಿದೆ. ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೆ ವಿಪುಲ ಅವಕಾಶವಿದೆ. ಆರು ಹೊಸ ಸಕ್ಕರೆ ಕಾರ್ಖಾನೆಗಳನ್ನು ಮಂಜೂರು ಮಾಡಲಾಗಿದ್ದು ಇನ್ನೂ ಕೆಲವನ್ನು ಇಷ್ಟರಲ್ಲೇ ಮಂಜೂರು ಮಾಡಲಾಗುವುದು. ಆದರೂ ಕೃಷಿ ಉದ್ಯಮಗಳ ಅಭಿವೃದ್ಧಿಯ ಹೆಚ್ಚಿದ ಸಮಗ್ರ ಸಾಧನೆಗೆ, ಕೃಷಿ ಹಾಗೂ ಕೃಷಿ ಆಧಾರಿತ ಕೈಗಾರಿಕೆಗಳಲ್ಲಿ ಅಧಿಕ ಪ್ರಮಾಣದ ಬಂಡವಾಳ ಹೂಡಿಕೆ ಮಾಡುವ ದಿಸೆಯಲ್ಲಿ ಇರುವಂಥ ತೊಡಕುಗಳನ್ನು ನಾವು ನಿವಾರಿಸಬೇಕು ಹಾಗೂ ಈ ಕ್ಷೇತ್ರದಲ್ಲಿ ಖಾಸಗಿ ಉದ್ದಿಮೆಗಳು ಬಂಡವಾಳ ಹೂಡುವಂತೆ ಪ್ರೋತ್ಸಾಹಿಸಬೇಕು.

61. ಕರ್ನಾಟಕದಲ್ಲಿ 38,000 ಚ.ಕಿ.ಮೀಟರುಗಳ ಅರಣ್ಯ ಪ್ರದೇಶವಿದ್ದು ಅದರಲ್ಲಿ, ನಿತ್ಯ ಹರಿದ್ವರ್ಣ ಹಾಗೂ ತೇವದಿಂದ ಕೂಡಿದ ಮತ್ತು ವರ್ಷಂಪ್ರತಿ ಎಲೆ ಉದುರುವ ಅರಣ್ಯಗಳಿರುವ 21,000 ಚ.ಕಿ.ಮೀ. ವಿಸ್ತೀರ್ಣದ ಅರಣ್ಯ ಪಶ್ಚಿಮ ಘಟ್ಟಗಳುದ್ದಕ್ಕೂ ಇದ್ದು, ಉಳಿದದ್ದು ಮರಗಿಡಗಳೇ ಇಲ್ಲದ ಶುಷ್ಕ ಹವಾಮಾನವಿರುವ ಜಿಲ್ಲೆಗಳಲ್ಲಿದೆ. ಅರಣ್ಯ ಒತ್ತುವರಿ ಹಾಗೂ ಅರಣ್ಯ ಉತ್ಪನ್ನಗಳಿಗಿರುವ ಬೇಡಿಕೆಯ ಪರಿಣಾಮವಾಗಿ ಈ ಅರಣ್ಯಗಳು ಅತಿ ಹೆಚ್ಚಿನ ಪ್ರಮಾಣದಲ್ಲಿ ನಶಿಸಿ ಹೋಗಿವೆ. ಸರ್ಕಾರವು, ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆ ಎಂಬ ಪರಿಕಲ್ಪನೆಯ ಮೂಲಕ ಅರಣ್ಯ ಯೋಜನೆಗಳಲ್ಲಿ ನಗರ ಹಾಗೂ ಗ್ರಾಮೀಣ ಜನತೆಯನ್ನು ತೊಡಗಿಸಲು ಕಾರ್ಯಕ್ರಮ ಹಾಕಿಕೊಂಡಿದೆ. ಅಗತ್ಯ ಅಧಿಕಾರಗಳಿರುವ ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸಲಾಗಿದೆ. ಪ್ರಸ್ತುತ ವರ್ಷದಲ್ಲಿ ಅರಣ್ಯ ಇಲಾಖೆಯು ರಾಜ್ಯದಲ್ಲಿ ಸುಮಾರು 10 ಕೋಟಿ ಮರಗಳನ್ನು ನೆಟ್ಟಿದೆಯೆಂದು ಸನ್ಮಾನ್ಯ ಸದಸ್ಯರಿಗೆ ತಿಳಿಸಲು ನನಗೆ ಸಂತೋಷವಾಗುತ್ತದೆ. “ಕರ್ನಾಟಕ ಪೂರ್ವ ಬಯಲು ಸೀಮೆ ವನನಿರ್ಮಾಣ ಮತ್ತು ಪರಿಸರ ಯೋಜನೆ” ಮತ್ತು “ಕರ್ನಾಟಕವನ್ನು ಹಸಿರಾಗಿಸಿ ಯೋಜನೆ” (ಪ್ರಾಜೆಕ್ಟ್ ಗ್ರೀನರ್ ಕರ್ನಾಟಕ) ಎಂಬ ಎರಡು ಯೋಜನೆಗಳನ್ನು, ವಿದೇಶಿ ಏಜೆನ್ಸಿಗಳ ಧನಸಹಾಯದಿಂದ ಕೈಗೊಳ್ಳಲು ಪ್ರಸ್ತಾಪಿಸಲಾಗಿದೆ.

62. ಕೃಷ್ಣಾ ಮತ್ತು ಕಾವೇರಿ ನದಿಗಳ ದಂಡೆಗಳಲ್ಲಿ ಅಥವಾ ಅದಕ್ಕೆ ಹತ್ತಿರವಿರುವ ಎಂಟಕ್ಕೂ ಹೆಚ್ಚು ನಗರಗಳಲ್ಲಿ ನದಿ ನೀರಿನ ಮಾಲಿನ್ಯವನ್ನು ತಡೆಗಟ್ಟಲು ‘ರಾಷ್ಟ್ರೀಯ ನದಿ ಕ್ರಿಯಾ ಯೋಜನೆ’ ಯನ್ನು ಕಾರ್ಯಗತಗೊಳಿಸಲಾಗುತ್ತಿದೆ ಮತ್ತು ಇನ್ನೂ ಆರು ನಗರಗಳನ್ನು 2,820 ಲಕ್ಷ ರೂ.ಗಳ ವೆಚ್ಚದಲ್ಲಿ ಈ ಯೋಜನೆಯ ವ್ಯಾಪ್ತಿಗೆ ತರಲು ಪ್ರಸ್ತಾಪಿಸಲಾಗಿದೆ.

63. ರಾಜ್ಯದಲ್ಲಿ ಮೀನುಗಾರಿಕೆಗೆ ಇರುವ ಹೇರಳ ಅವಕಾಶವನ್ನು ಪರಿಗಣಿಸಿ ನನ್ನ ಸರ್ಕಾರವು ಶಿವಮೊಗ್ಗ, ರಾಯಚೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿ ಒಟ್ಟು 6.29 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಇಇಸಿ (ಯುರೋಪಿಯನ್ ಇಕಾನಾಮಿಕ್ ಕಮ್ಯೂನಿಟಿ) ನೆರವಿನೊಂದಿಗೆ ಒಳನಾಡು ಮೀನುಗಾರಿಕೆ ಅಭಿವೃದ್ಧಿಯನ್ನು ಕೈಗೊಳ್ಳಲು ಉದ್ದೇಶಿಸಿದೆ. ಈ ಯೋಜನೆಯಲ್ಲಿ ಮೀನುಗಾರಿಕೆ ಸಹಕಾರ ಸಂಘಗಳ ಮೂಲಕ ಮೀನುಮರಿ ಉತ್ಪಾದನೆ ಮಾತ್ರವಲ್ಲದೆ ಕೆರೆಗಳಲ್ಲಿ ಮತ್ತು ಜಲಾಶಯಗಳಲ್ಲಿ ಒಳನಾಡು ಮೀನುಗಾರಿಕೆಯ ಅಭಿವೃದ್ಧಿಗೆ ಕೂಡ ಉದ್ದೇಶಿಸಲಾಗಿದೆ.

64. ಕೇಂದ್ರ ಪ್ರಾಯೋಜಿತ ಯೋಜನೆಯ ಅಡಿಯಲ್ಲಿ, 1,060 ಲಕ್ಷ ರೂ.ಗಳ ಒಟ್ಟು ವೆಚ್ಚದಲ್ಲಿ ಮಲ್ಪೆ ದ್ವಿತೀಯ ಹಂತದ ಮೀನುಗಾರಿಕೆ ಬಂದರು ಯೋಜನೆಯ ನಿರ್ಮಾಣವನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ ಮತ್ತು ಈ ಪ್ರಸ್ತಾವಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆಯನ್ನು ನಿರೀಕ್ಷಿಸಲಾಗಿದೆ. ಅಲ್ಲದೆ, ಉತ್ತರ ಕನ್ನಡ ಜಿಲ್ಲೆಯ ಬೆಳಕೇರಿ, ಭಟ್ಕಳ (ಅಳ್ವೆಕೋಡಿ) ಮತ್ತು ಗಂಗವಳ್ಳಿಗಳಲ್ಲಿ ಜೆಟ್ಟಿಗಳನ್ನುಸಣ್ಣ ಇಳಿದಾಣ ಕೇಂದ್ರಗಳನ್ನು ನಿರ್ಮಿಸಲು ಸಹ ಪ್ರಸ್ತಾಪಿಸಲಾಗಿದೆ.

65. ರಾಜ್ಯದಲ್ಲಿ ಉಪ್ಪುನೀರು ಮೀನು ಸಾಕಣೆಗೆ ಉತ್ತೇಜನ ನೀಡುವ ದೃಷ್ಟಿಯಿಂದ ಸರ್ಕಾರಿ ಸ್ವಾಮ್ಯದಲ್ಲಿರುವ ಮೀನು ಸಾಕಣೆಗೆ ಸೂಕ್ತವಿರುವ ಉಪ್ಪುನೀರು ಪ್ರದೇಶದ ಪೈಕಿ ಶೇಕಡಾ 50ರಷ್ಟು ಉಪ್ಪುನೀರು ಪ್ರದೇಶವನ್ನು ಸೀಗಡಿ ಸಾಕಣೆಗಾಗಿ ಮೀನುಗಾರರಿಗೆ ಮೀನುಗಾರರ ಸಹಕಾರಿ ಸಂಘಗಳಿಗೆ ಅಂಥ ಪ್ರತಿ ಮೀನುಗಾರನಿಗೆಸಂಘಕ್ಕೆ ಒಂದು ಹೆಕ್ಟೇರಿನಂತೆ ಹಂಚಲು ಗುತ್ತಿಗೆ ನೀತಿಯನ್ನು ಸರ್ಕಾರವು ಜಾರಿಗೆ ತಂದಿದೆ. ಈ ಶೇಕಡಾ 50ರಷ್ಟು ಪ್ರದೇಶದಲ್ಲಿ ಶೇ 18ರಷ್ಟನ್ನು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನರಿಗೆ ಮೀಸಲಿರಿಸಲಾಗಿದೆ. ಸರ್ಕಾರವು ಉಪ್ಪುನೀರು ಮೀನುಗಾರಿಕೆಗೆ, ಅದರಲ್ಲಿಯೂ ನಿರ್ದಿಷ್ಟವಾಗಿ ಸೀಗಡಿ ಸಾಕಣೆಗೆ

ಉತ್ತೇಜನ ನೀಡುವ ದೃಷ್ಟಿಯಿಂದ ವಿದೇಶಿ ಹಾಗೂ ಸ್ವದೇಶಿ ಖಾಸಗಿ ಉದ್ಯಮಗಳು ಹಣ ಹೂಡುವಂಥ ಒಂದು ಬೃಹತ್ ಯೋಜನೆಯನ್ನು ಪ್ರಾರಂಭಿಸಲು ಉದ್ದೇಶಿಸಿದೆ.

66. ಸಾರ್ವಜನಿಕ ವಿತರಣಾ ಪದ್ಧತಿಯ ವ್ಯಾಪ್ತಿಗೆ ರಾಜ್ಯದ ಸಂಪೂರ್ಣ ಜನತೆಯನ್ನು ಒಳಪಡಿಸಲಾಗಿದೆ. 14 ಜಿಲ್ಲೆಗಳಲ್ಲಿ ಅತ್ಯಂತ ಹಿಂದುಳಿದವುಗಳೆಂದು ಗುರುತಿಸಲಾಗಿರುವ ಪ್ರದೇಶಗಳಲ್ಲಿ ಎಂದರೆ ಬರಪೀಡಿತ ಪ್ರದೇಶ ಯೋಜನೆಯ (ಡಿಪಿಎಪಿ) ಅಡಿಯಲ್ಲಿ ಬರುವ 71 ಬ್ಲಾಕುಗಳು ಮತ್ತು ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಯ (ಐಟಿಡಿಪಿ) ಅಡಿಯಲ್ಲಿ ಬರುವ 23 ಬ್ಲಾಕುಗಳಲ್ಲಿ ಸಾರ್ವಜನಿಕ ವಿತರಣಾ ಪದ್ಧತಿಯನ್ನು ಪುನಶ್ಚೇತನಗೊಳಿಸುವ ಕಾರ್ಯವನ್ನ ಕೈಗೊಳ್ಳಲಾಗಿದೆ. ಪರಿಷ್ಕೃತ ಸಾರ್ವಜನಿಕ ವಿತರಣಾ ಪದ್ಧತಿಯ (ಆರ್‌ಪಿಡಿಎಸ್) ಪ್ರದೇಶಗಳಲ್ಲಿ 36.75 ಲಕ್ಷ ಕೇಸರಿ ಬಣ್ಣದ ಪಡಿತರ ಚೀಟಿಗಳನ್ನು ಮತ್ತು 24.59 ಲಕ್ಷ ತ್ರಿವರ್ಣ ಪಡಿತರ ಚೀಟಿಗಳನ್ನು ವಿತರಣೆ ಮಾಡಲಾಗಿದೆ.

67. ಸಂಚಾರಿ ನ್ಯಾಯ ಬೆಲೆ ಅಂಗಡಿಗಳನ್ನು ಆರಂಭಿಸುವುದು, ಪರಿಷ್ಕೃತ ಸಾರ್ವಜನಿಕ ವಿತರಣಾ ಪದ್ಧತಿಯನ್ನು ಬಲಪಡಿಸಲು ಪ್ರಸ್ತಾಪಿಸಿರುವ ಮಾರ್ಗೋಪಾಯಗಳ ಪೈಕಿ ಒಂದಾಗಿದೆ. ಸಂಚಾರಿ ನ್ಯಾಯ ಬೆಲೆ ಅಂಗಡಿಗಳ ಸ್ಥಾಪನೆಗಾಗಿ ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರದಿಂದ 50 ಲಕ್ಷ ರೂಪಾಯಿಗಳ ನೆರವನ್ನು ಪಡೆದಿದೆ. ಈ ಹಣವನ್ನು ಪಡೆದುಕೊಂಡು ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು 13 ಸಂಚಾರಿ ನ್ಯಾಯಬೆಲೆ ಅಂಗಡಿ ವ್ಯಾನ್‌ಗಳನ್ನು ಖರೀದಿಸಿದೆ. ಅವುಗಳು ಪ್ರಮುಖವಾಗಿ ಗುಡ್ಡಗಾಡು ಮತ್ತು ಬುಡಕಟ್ಟು ಪ್ರದೇಶಗಳಲ್ಲಿ ತೃಪ್ತಿಕರವಾಗಿ ಕಾರ್ಯ ನಿರ್ವಹಿಸುತ್ತಿವೆ.

68. ಸಾಮಾಜಿಕ - ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳೆಲ್ಲವುಗಳಿಗೂ ಸಾಕಷ್ಟು ಪ್ರಮಾಣದ ಕಾರ್ಯನೀತಿ ವಿಶ್ಲೇಷಣೆ ಮತ್ತು ಬೆಂಬಲದ ಅಗತ್ಯವಿದೆ. ಯೋಜನಾ ಮತ್ತು ಆರ್ಥಿಕ ನೀತಿಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡುವ ದೃಷ್ಟಿಯಿಂದ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನನ್ನ ಸರ್ಕಾರವು ರಾಜ್ಯ ಯೋಜನಾ ಮಂಡಳಿಯೊಂದನ್ನು ರಚಿಸಿದೆ. ಯೋಜನೆಗಳನ್ನು ರೂಪಿಸುವಲ್ಲಿ ಮತ್ತು ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಲ್ಲಿ ರಾಜ್ಯದ ಅರ್ಥವ್ಯವಸ್ಥೆಯನ್ನು ಬಲಪಡಿಸುವಲ್ಲಿ ಮತ್ತು ಯೋಜನೆಯ ವಿವಿಧ ವಿಷಯಗಳ ಸಂಬಂಧದಲ್ಲಿ ಸರ್ಕಾರಕ್ಕೆ ಸಲಹೆ ನೀಡಲು ಎರಡು ವರ್ಷಗಳ ಅವಧಿಗೆ ಈ ಮಂಡಳಿಯನ್ನು ರಚಿಸಲಾಗಿದೆ.

69. ಸನ್ಮಾನ್ಯ ಸದಸ್ಯರೆ, ಈ ನನ್ನ ಭಾಷಣದಲ್ಲಿ ನಾನು ಕೆಲವು ಪ್ರಮುಖ ಕ್ಷೇತ್ರಗಳ ಬಗ್ಗೆ ಮಾತ್ರವೇ ತಿಳಿಸಿದ್ದೇನೆ. ನನ್ನ ಸರ್ಕಾರವು, ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಇತರ ಕ್ಷೇತ್ರಗಳಲ್ಲೂ ಸಾಕಷ್ಟು ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಯಾವುದೇ ಅನುಮಾನವಿಲ್ಲ. ಬಡತನ ನಿವಾರಣಾ ಕಾರ್ಯಕ್ರಮವು ಸರ್ಕಾರವು ಹತ್ತು ಹಲವು ದೃಷ್ಟಿಕೋನಗಳಲ್ಲಿ ವಿಚಾರ ಮಾಡಿ, ಸೂಕ್ತ ಪ್ರಯತ್ನಗಳನ್ನು ಒಗ್ಗೂಡಿಸಿ ಸಾಧಿಸಬೇಕಾದಂಥ ಒಂದು ಕಾರ್ಯಕ್ರಮ.

70. ಈ ಎಲ್ಲ ಪ್ರಯತ್ನಗಳಲ್ಲಿ ಸನ್ಮಾನ್ಯ ಸದಸ್ಯರು ತಮ್ಮ ಸಹಕಾರವನ್ನು ಹಾಗೂ ರಚನಾತ್ಮಕ ಅಭಿಪ್ರಾಯಗಳನ್ನು ನೀಡುತ್ತಾರೆಂದು ನಾನು ಆಶಿಸುತ್ತೇನೆ.

ಜೈ ಹಿಂದ್ ಜೈ ಕರ್ನಾಟಕ

(ಸದನವು 1-00 ಗಂಟೆಗೆ ಪುನಃ ಸಮಾವೇಶಗೊಂಡಿತು. ಸಭಾಧ್ಯಕ್ಷರಾದ ವಿ.ಎಸ್. ಕೌಜಲಗಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)